೩೨೩

ಉಪನ್ಯಾಸ
ಗ್ರಂಥಮಾಲೆ

ಪ್ರೌಢರ ಜಗತ್ತಿನಲ್ಲಿ ಮಕ್ಕಳು

ಕೆ. ಜಿ. ಗುರುಮೂರ್ತಿ

ಮಾರ್ಚ, ೧೯೮೨

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಉಪನ್ಯಾಸ ಗ್ರಂಥಮಾಲೆ

೩೨೫

ಪ್ರೌಢರ ಜಗತ್ತಿನಲ್ಲಿ ಮಕ್ಕಳು

ಕೆ. ಜಿ. ಗುರುಮೂರ್ತಿ

ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಮಾರ್ಚ, ೧೯೮೧

ಪ್ರಕಾಶಕರು :

ಸಿ. ಎಸ್. ಕಣವಿ
ನಿರ್ದೇಶಕರು, ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦ ೦೦೩

ಪ್ರಥಮ ಮುದ್ರಣ : ೫,೦೦೦ ಪ್ರತಿಗಳು
ಮಾರ್ಚ್, ೧೯೮೨

ಬೆಲೆ : ೫೦ ಪೈಸೆ

ಮುದ್ರಕರು :

ಎಂ. ಎಸ್. ಹಿರಿಯಣ್ಣಯ್ಯ
ನಿರ್ದೇಶಕರು
ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ
ಧಾರವಾಡ–೫೮೦ ೦೦೩

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ಪ್ರಸಾರಾಂಗದ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ಈಗ ವಿಶ್ವವಿದ್ಯಾಲಯದ ಆಡಳಿತ ಕ್ಷೇತ್ರದಲ್ಲಿರುವ ನಾಲ್ಕು ಜಿಲ್ಲೆಗಳಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕಶಾಸ್ತ್ರ ಮೊದಲಾದ ಶಾಖೆಗಳಿಗೆ, ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನಭಂಡಾರದ ಅಲ್ಪಾಂಶವನ್ನಾದರೂ ಮಹಾ ಜನರ ಮನೆ ಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರದ ಕಾರ್ಯದಲ್ಲಿ ಭಾಗವಹಿಸುವದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೩೨೦ ಪುಸ್ತಕಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ನಾಲ್ಕು-ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಂಡಿ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಸ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ-೫೮೦ ೦೦೩

ಡಿ. ಎಂ. ನಂಜುಂಡಪ್ಪ
ಕುಲಪತಿಗಳು

ಅರಿಕೆ

೧೯೭೯ನೇ ವರ್ಷವನ್ನು ವಿಶ್ವಸಂಸ್ಥೆಯು ಅಂತರರಾಷ್ಟ್ರೀಯ ಮಕ್ಕಳ ವರ್ಷವೆಂದು ಸಾರಿತ್ತು. ಇದಕ್ಕೆ ಕಾರಣಗಳಿಲ್ಲದಿಲ್ಲ. ವಿಶ್ವದಾದ್ಯಂತ ಅನಾರೋಗ್ಯ, ಅನಕ್ಷರತೆ, ಅಸಹಕಾರ, ಹಸಿವು, ದಬ್ಬಾಳಿಕೆ, ಶೋಷಣೆ ಮುಂತಾದ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿರುವ ಕೋಟ್ಯಾಂತರ ಮಕ್ಕಳಿದ್ದಾರೆ. ಆರ್ಥಿಕವಾಗಿ ಅಭಿವೃದ್ಧಿ ಹೊಂದಿದ ದೇಶಗಳಲ್ಲಿನ ಮಕ್ಕಳ ಸಮಸ್ಯೆಗಳು ಒಂದು ಬಗೆಯಾದರೆ ಹಿಂದುಳಿದ ಹಾಗೂ ಮುಂದುವರೆಯುತ್ತಿರುವ ದೇಶವಲ್ಲಿನ ಮಕ್ಕಳ ಸಮಸ್ಯೆಗಳು ಇನ್ನೊಂದು ವಿಧ. ಈ ಎಲ್ಲಾ ಸಮಸ್ಯೆಗಳಿಗೆ ಪ್ರಪಂಚದ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಬಿಕ್ಕಟ್ಟುಗಳೇ ಕಾರಣ. ಎಲ್ಲಾ ಸಮಾಜಗಳೂ ತಮ್ಮ ಈ ಮೂಲ ಸಮಸ್ಯೆಗಳನ್ನು ಸೂಕ್ತ ರೀತಿಯಲ್ಲಿ ನಿವಾರಿಸಿಕೊಳ್ಳಲು ಪ್ರಯತ್ನಿಸಿದರೆ ಸಮಾಜದಲ್ಲಿನ ಉಳಿದ ಸಮಸ್ಯೆಗಳಂತೆ ಮಕ್ಕಳ ಸಮಸ್ಯೆಗಳು ನಿವಾರಣೆಯಾಗುತ್ತವೆ. ಆದರೆ ಪಶು ಮನೋಭಾವನೆಯ ಮಾನವ ಈ ವಿಷಯದತ್ತ ಸೂಕ್ತ ಗಮನ ನೀಡುತ್ತಿಲ್ಲ. ಇಂತಹ ಅನೇಕ ವಿಷಯಗಳಲ್ಲಿ ಪ್ರೌಢರು ಮಕ್ಕಳಿಗೆ ತರುವ ಸಮಸ್ಯೆಗಳೇ ಅನೇಕ. ಪ್ರೌಢರು ಯಾವ ರೀತಿಯಲ್ಲಿ, ಯಾವ ಯಾವ ವಿಷಯಗಳಲ್ಲಿ ಮಕ್ಕಳಿಗೆ ಸಮಸ್ಯೆ ತರುತ್ತಾರೆ, ಇವನ್ನು ಹೇಗೆ ನಿವಾರಿಸಬಹುದೆಂಬುದನ್ನು ಈ ಕಿರು ಹೊತ್ತಿಗೆಯಲ್ಲಿ ಚಿತ್ರಿಸಲಾಗಿದೆ.

೨೦, ಸೆಪ್ಟೆಂಬರ ೧೯೭೯ ರಂದು ಧಾರವಾಡ ಜಿಲ್ಲೆಯ ಹಿರೇಕೆರೂರಿನ ಕಿರಿಯರ ಕಾಲೇಜಿನ ಆಶ್ರಯದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗ ಏರ್ಪಡಿಸಿದ್ದ ಸಭೆಯಲ್ಲಿ ಮಾಡಿದ ಭಾಷಣದ ಲಿಖಿತ ರೂಪಾಂತರವಿದು. ೧೯೭೯ನೇ ವರ್ಷವನ್ನು ಮಕ್ಕಳ ವರ್ಷವನ್ನಾಗಿ ಸಾರಿರುವ ಸಂದರ್ಭದಲ್ಲಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಕೈಗೊಳ್ಳಬೇಕಾದ ಅನೇಕ ಕಾರ್ಯದಲ್ಲಿ

ವಿಶ್ವವಿದ್ಯಾಲಯದ ಪ್ರಸಾರಂಗ ಯಾವುದಾದರೂ ವಿಶೇಷ ರೀತಿಯಲ್ಲಿ ಭಾಗವಹಿಸಬೇಕು ಎಂದು ಕೇಳಿದಾಗ ಪ್ರಸಾರಾಂಗದ ನಿರ್ದೇಶಕರಾದ ಶ್ರೀ ಸಿ.ಎಸ್. ಕಣವಿಯವರು ನಮ್ಮ ಸಲಹೆಯನ್ನು ಒಪ್ಪಿ ಇಡೀ ವರ್ಷ ಅವರು ನಡೆಸುವ ಪ್ರತಿ ಸಭೆಗಳಲ್ಲಿಯೂ ಒಬ್ಬ ಪಂಡಿತ ಪ್ರತಿಷ್ಠಿತ ವ್ಯಕ್ತಿಯಿಂದ ಮಕ್ಕಳಿಗೆ ಸಂಬಂಧಿಸಿದ ಅನೇಕ ವಿಷಯಗಳ ಬಗ್ಗೆ ಪ್ರಸಾರ ಭಾಷಣ ಮಾಡಿಸಿದ್ದಾರೆ. ಈ ಬಗ್ಗೆ ಮತ್ತು ನನಗೇ ಇಂತಹ ಒಂದು ಭಾಷಣ ಕಾರ್ಯಕ್ರಮದಲ್ಲಿ ಭಾಗವಹಿಸಲು ಅನುವು ಮಾಡಿಕೊಟ್ಟಿದ್ದಕ್ಕೆ ನಾನು ಅತ್ಯಂತ ಆಭಾರಿಯಾಗಿದ್ದೇನೆ. ಇದೇ ರೀತಿ ಪ್ರಸಾರಾಂಗದ ಸಹಾಯಕ-ನಿರ್ದೇಶಕರಾದ ಶ್ರೀ ಗುದ್ದೀನರವರು ಮತ್ತು ಅವರ ಸಹಾಯಕ ಸಿಬ್ಬಂದಿಯವರು ಸಹಾಯ ಮಾಡಿದ್ದಾರೆ. ಡಾ. ಜಿ. ಎಸ್. ಬಿದರಕೊಪ್ಪರವರು ಲೇಖನವನ್ನು ಆಮೂಲಾಗ್ರವಾಗಿ, ತಜ್ಞ ದೃಷ್ಟಿಯಿಂದ ಓದಿ ಸೂಕ್ತ ಸಲಹೆ ಸಹಾಯ ಮಾಡಿದ್ದಾರೆ. ಹಿರೇಕೆರೂರಿನ ಕಿರಿಯ ಕಾಲೇಜಿನ ಪ್ರಾಚಾರ್ಯರು, ಪ್ರಾಧ್ಯಾಪಕರು ಮತ್ತು ಹಿರೇಕೆರೂರಿನ ಹಿರಿಯರು ನಮಗೆ ಸೂಕ್ತ ಅನುಕೂಲತೆ ಮಾಡಿಕೊಟ್ಟಿದ್ದಾರೆ. ಈ ಎಲ್ಲಾ ಮಹನೀಯರುಗಳಿಗೂ, ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೂ ನನ್ನ ಅನಂತ ವಂದನೆಗಳು. ನನ್ನ ಈ ಕಿರುಹೊತ್ತಿಗೆಯು ಮಕ್ಕಳ ಅನೇಕ ಸಮಸ್ಯೆಗಳಲ್ಲಿ ಕೆಲವನ್ನಾದರೂ ನಿವಾರಿಸಲು ನೆರವಾದರೆ ನನ್ನ ಹಾಗೂ ಈ ಎಲ್ಲಾ ಮಹಾನೀಯರುಗಳ ಶ್ರಮ ಸಾರ್ಥಕವಾದಂತಾಗುತ್ತದೆ ಎಂದು ಭಾವಿಸುತ್ತೇನೆ.

ಮಾನವಶಾಸ್ತ್ರ ವಿಭಾಗ, **ಕೆ. ಜಿ. ಗುರುಮೂರ್ತಿ**
ಕ. ವಿ. ಧಾರವಾಡ-೩
೮. ೧೨. ೧೯೮೧.

ಪರಿವಿಡಿ

ಅಧ್ಯಾಯ ೧

ಪ್ರಸ್ತಾವನೆ

೧೯೫೭ ರಷ್ಟು ಹಿಂದೆಯೇ ವಿಶ್ವಸಂಸ್ಥೆಯು ಮಕ್ಕಳ, ಅದರಲ್ಲೂ ಹಿಂದುಳಿದ ಮತ್ತು ಮುಂದುವರಿಯುತ್ತಿರುವ ರಾಷ್ಟ್ರಗಳಲ್ಲಿನ ಮಕ್ಕಳ ಸಮಸ್ಯೆಗಳನ್ನು ಮನಗಂಡು ಹತ್ತು ಹಕ್ಕುಗಳ ಒಂದು ಪಟ್ಟಿಯನ್ನು ಸಿದ್ಧಪಡಿಸಿದ್ದಿತು. ಮಕ್ಕಳಿಗೆ ನಮ್ಮ ಸಮಾಜದಿಂದ, ರಾಷ್ಟ್ರದಿಂದ ಯಾವ ನಿರ್ಬಂಧಗಳಿಲ್ಲದೆ ನೀಡಲ್ಪಡುವ ಈ ಹಕ್ಕುಗಳು ಕೆಳಗಿನಂತಿವೆ :

೧. ಪ್ರೀತಿ, ವಾತ್ಸಲ್ಯ, ವಿಶ್ವಾಸ

೨. ಪೌಷ್ಟಿಕ ಆಹಾರ ಮತ್ತು ಔಷಧೋಪಚಾರ

೩. ಉಚಿತ ವಿದ್ಯಾಭ್ಯಾಸ

೪. ಆಟ-ಪಾಠಗಳಿಗೆ ಸದವಕಾಶ

೫. ಹೆಸರು ಮತ್ತು ರಾಷ್ಟ್ರೀಯತೆ

೬. ಅಂಗವಿಕಲತೆ ಇದ್ದರೆ ವಿಶೇಷ ರಕ್ಷಣೆ

೭. ಆಪತ್ತಿನಲ್ಲಿ ಆದ್ಯ ರಕ್ಷಣೆ

೮. ಸಾಮರ್ಥ್ಯವನ್ನು ಬೆಳೆಸಿ ಸಮಾಜಕ್ಕೆ ಸೇವೆಸಲ್ಲಿಸುವ ತಿಳುವಳಿಕೆ

೯. ಶಾಂತಿ ಮತ್ತು ಸೌಹಾರ್ದತೆಯ ಬಗ್ಗೆ ಪ್ರಜ್ಞೆ

೧೦. ಈ ಹಕ್ಕುಗಳನ್ನು ಜನಾಂಗ, ಲಿಂಗ, ಧರ್ಮ ರಾಷ್ಟ್ರ ಅಥವಾ ಸಾಮಾಜಿಕ, ಮೂಲಗಳ ಭಿನ್ನತೆ ಇಲ್ಲದೆ ಅನುಭವಿಸುವುದು.

ಈ ಹಕ್ಕುಗಳನ್ನು ೩೩ ವರ್ಷಗಳ ಹಿಂದೆಯೇ ಮಕ್ಕಳಿಗೆ ಕೊಡಮಾಡಿದ್ದರೂ, ವಿಶ್ವಸಂಸ್ಥೆಯ ಅನೇಕ ಸದಸ್ಯ ರಾಷ್ಟ್ರಗಳು ಮಕ್ಕಳ ಕಲ್ಯಾಣಕ್ಕೆ ತಮ್ಮದೇ ಆದ ಕಾರ್ಯಕ್ರಮಗಳನ್ನು ರೂಪಿಸಿ ಕೊಂಡಿದ್ದರೂ, ಇಂದಿಗೂ ಮಕ್ಕಳ ಅನೇಕ ಸಮಸ್ಯೆಗಳು ಉಳಿದು ಕೊಂಡಿವೆ. ಇದಕ್ಕೆ ಈ ರಾಷ್ಟ್ರಗಳಲ್ಲಿರುವ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸಮಸ್ಯೆಗಳೇ ಕಾರಣವಾಗಿವೆ. ಇದರಿಂದಾಗಿ ಅನೇಕ ರಾಷ್ಟ್ರಗಳು ತಾವು ರೂಪಿಸಿಕೊಂಡ ಕಾರ್ಯಕ್ರಮಗಳನ್ನು ಪೂರ್ಣವಾಗಿ ನಿರ್ವಹಿಸದೆ ಕೈ ಬಿಟ್ಟಿವೆ. ಇಂದು ಸೂಕ್ತ ಮುಂದಾಳುತನ ಹಾಗೂ ಮಾರ್ಗದರ್ಶನ, ಇಲ್ಲದೆ ಇರುವದು ತಜ್ಞರ ಅಭಾವ, ಹಣದ ಕೊರತೆ ಮುಂತಾದವು ಇನ್ನೂ ಹೆಚ್ಚಿನ ಸಮಸ್ಯೆಗಳನ್ನು ತಂದಿವೆ. ಈ ನಡುವೆ ಮಕ್ಕಳ ಅನೇಕ ಸಮಸ್ಯೆಗಳು ಗಂಭೀರ ಹಂತವನ್ನು ಮುಟ್ಟಿ ಹಳೆಯ ಕಾನೂನು ಮತ್ತು ಕಾರ್ಯಕ್ರಮಗಳನ್ನು ನಿಷ್ಕ್ರಿಯಗೊಳಿಸಿವೆ. ಈ ಎಲ್ಲ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ಮಕ್ಕಳ ಜೀವನವನ್ನು ಉತ್ತಮಪಡಿಸಲು ಮತ್ತು ಅವರು ಉತ್ತಮ ನಾಗರಿಕರಾಗುವಂತೆ ಮಾಡಲು ೧೯೭೯ ನೇ ವರ್ಷವನ್ನು ವಿಶ್ವಸಂಸ್ಥೆಯು, ಅಂತರ ರಾಷ್ಟ್ರೀಯ ಮಕ್ಕಳ ವರ್ಷವನ್ನಾಗಿ ಸಾರಿದೆ. ಇಡೀ ಒಂದು ವರ್ಷ ಸರಕಾರಗಳ ಮತ್ತು ಸಮಾಜದ ಗಮನವನ್ನು ಮಕ್ಕಳು ಅವರ

ಸಮಸ್ಯೆಗಳು; ಅವುಗಳ ನಿವಾರಣೆಯತ್ತ ಸೆಳೆಯಲು ಮತ್ತು ಅವುಗಳ ಬಗ್ಗೆ ಮತ್ತೊಮ್ಮೆ ಪರಿಶೀಲನೆ ನಡೆಸಲು ಈ ವರ್ಷ ಸಹಾಯುವಾಗುತ್ತದೆ.

ಅಂತರರಾಷ್ಟ್ರೀಯ ಮಕ್ಕಳ ವರ್ಷದ ಉದ್ದೇಶಗಳು:

ಎಲ್ಲಾ ದೇಶಗಳಲ್ಲಿಯ ಎಲ್ಲಾ ಮಕ್ಕಳಿಗೂ, ಅದರಲ್ಲೂ ಚಿಕ್ಕ ಮಕ್ಕಳಿಗೆ ವಿಶೇಷ ಗಮನ ನೀಡಬೇಕೆಂಬುದು ಅ. ಮ. ವ. ದ. ಉದ್ದೇಶ. ಮುಖ್ಯ ಉದ್ದೇಶಗಳು ಹೀಗಿವೆ;

೧. ಎಲ್ಲಾ ದೇಶಗಳೂ, ಬಡ ಅಥವಾ ಶ್ರೀಮಂತವಿರಲಿ ಮಕ್ಕಳ ಒಳಿತಿಗೆ ತಂದುಕೊಂಡಿರುವ ಕಾರ್ಯಕ್ರಮಗಳನ್ನು ಪುನಃ ವಿಮರ್ಶಿಸುವುದು ಮತ್ತು ಪ್ರತಿ ದೇಶದ ಸ್ಥಿತಿ, ಅವಶ್ಯಕತೆ ಮತ್ತು ಆದ್ಯತೆಗಳಿಗೆ ಅನುಗುಣವಾಗಿ ರಾಷ್ಟ್ರೀಯ ಮತ್ತು ಸ್ಥಳೀಯ ಕಾರ್ಯಕ್ರಮಗಳಿಗೆ ಬೆಂಬಲವನ್ನು ಸಂಗ್ರಹಿಸುವುದು;

೨. ಮಕ್ಕಳ ವಿಶೇಷ ಅವಶ್ಯಕತೆಗಳ ಬಗ್ಗೆ ನಿರ್ಣಯ ತೆಗೆದುಕೊಳ್ಳುವವರ ಮತ್ತು ಸಾರ್ವಜನಿಕರ ತಿಳುವಳಿಕೆಯನ್ನು ಹೆಚ್ಚಿಸುವುದು;

೩. ಒಂದು ಕಡೆ ಮಕ್ಕಳಿಗಾಗಿ ಇರುವ ಕಾರ್ಯಕ್ರಮಗಳು ಮತ್ತು ಇನ್ನೊಂದು ಕಡೆ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ, ಇವುಗಳ ನಡುವಿನ ಮುಖ್ಯ ಕೊಂಡಿಗಳನ್ನು

ಕಂಡುಕೊಂಡು ಅವುಗಳನ್ನು ಉತ್ತಮ ಪಡಿಸುವದು ಮತ್ತು

೪. ರಾಷ್ಟ್ರ ಮಟ್ಟದಲ್ಲಿ ಮಕ್ಕಳಿಗೆ ಉಪಯುಕ್ತವಾದ, ಹೊಂದಲು ಸಾಧ್ಯವಾದ ಗುರಿಗಳುಳ್ಳ ಅಲ್ಪ ಮತ್ತು ಧೀರ್ಘಕಾಲಿಕ, ನಿರ್ದಿಷ್ಟ ಮತ್ತು ಕಾರ್ಯಗತ ಕ್ರೀಯೆಗಳಿಗೆ ಉತ್ತೇಜನ ನೀಡುವದು.

ಈ ವರ್ಷವು ಮಕ್ಕಳಿಗೆ ತಮ್ಮ ದೈಹಿಕ ಕಲ್ಯಾಣದ ಜೊತೆಗೆ ಬೌದ್ಧಿಕ, ಮಾನಸಿಕ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ಒತ್ತಿ ಹೇಳಲು ಒಂದು ಅವಕಾಶವನ್ನು ನೀಡುತ್ತದೆ. ವಿಶೇಷ ಉದ್ದೇಶವೆಂದರೆ, ಅನಾನುಕೂಲ ಸ್ಥಿತಿಯಲ್ಲಿರುವ ಮಕ್ಕಳಿಗೆ ವಿಶೇಷ ಗಮನವನ್ನು ನೀಡುವದು. ಅದರಲ್ಲೂ ಅತಿ ಹೆಚ್ಚು ತೊಂದರೆಗೀಡಾಗುವವರಾದ; ಉದಾಹರಣೆಗೆ, ಸಮಾಜದಲ್ಲಿ ಸರಿಸಮಾನವಾದ ಸ್ಥಾನ ಪಡೆಯದ ಚಿಕ್ಕವಯಸ್ಸಿನ ಹುಡುಗಿಯರು; ಕೊಳಚೆ ಪ್ರದೇಶದ ಮಕ್ಕಳು; ವಲಸೆ ಬಂದ ಕೆಲಸಗಾರರ ಮಕ್ಕಳು; ಕೆಟ್ಟು ಹೋದ ಮಕ್ಕಳು, ಅನಾಥ ಮಕ್ಕಳು; ನಿರಾಶ್ರಿತರ ಮಕ್ಕಳು; ಅವಿವಾಹಿತ ತಾಯಂದಿರ ಮಕ್ಕಳು, ಬಡ ಗ್ರಾಮೀಣ ಪ್ರದೇಶದ ಮಕ್ಕಳು, ಅಪರಾಧ ಮತ್ತು ಮಾದಕ ವಸ್ತುಗಳಿಗೆ ಒಳಗಾದ ಮಕ್ಕಳು; ದೈಹಿಕವಾಗಿ ಮತ್ತು ಮಾನಸಿಕವಾಗಿ ಊನವಾದ ಮಕ್ಕಳು;ಮತ್ತು ಪೌಷ್ಟಿಕ ಆಹಾರದ ಅಭಾವದಿಂದ ಬಳಲುತ್ತಿರುವ ಅಸಂಖ್ಯಾತ ಮಕ್ಕಳಿಗೆ ಗಮನ ನೀಡುವುದು.

ಅ. ಮ. ವ ಮತ್ತು ಭಾರತ:

ವಿಶ್ವ ಸಂಸ್ಥೆಯ ಇಚ್ಛೆಯಂತೆ ಭಾರತವು ತನ್ನದೇ ಆದ ಮಕ್ಕಳ ಕಾರ್ಯಕ್ರಮಗಳ ಪಟ್ಟಿಯನ್ನು ಸಿದ್ಧಪಡಿಸಿಕೊಂಡಿದೆ.

ಅಲ್ಲದೆ ಮಕ್ಕಳಿಗಾಗಿ ರಾಷ್ಟ್ರೀಯ ಧೋರಣೆಗಳನ್ನು ಹೊಂದಿರುವ ಕೆಲವೇ ದೇಶಗಳಲ್ಲಿ ಭಾರತವೂ ಒಂದು. ಇಂತಹ ಧೋರಣೆಯು ಮಕ್ಕಳ ಒಳಿತಿಗೆ ಬೇಕಾದ ಕಾರ್ಯಕ್ರಮಗಳನ್ನು ಕಾರ್ಯಗತ ಗೊಳಿಸಲು ಒಂದು ಚೌಕಟ್ಟನ್ನು ನೀಡುತ್ತದೆ. ರಾಷ್ಟ್ರೀಯ ಧೋರ ಣೆಯು ರಾಷ್ಟ್ರದ ಮಕ್ಕಳನ್ನು 'ಒಂದು ಅತಿ ಮಹತ್ವದ ಆಸ್ತಿ, ಅವರ ಪಾಲನೆ ಮತ್ತು ಚಿಂತನೆ ನಮ್ಮ ಹೊಣೆ' ಎಂದು ಪ್ರಕಟ ಪಡಿಸಿದೆ. ಮಕ್ಕಳ ಕಲ್ಯಾಣಕ್ಕೆ ಸಂಬಂಧಿಸಿದ ಧೋರಣೆಗಳನ್ನು ರೂಪಿಸಲು, ಪ್ರಧಾನ ಮಂತ್ರಿಗಳ ಅಧ್ಯಕ್ಷತೆಯಲ್ಲಿ 'ರಾಷ್ಟ್ರೀಯ ಮಕ್ಕಳ ಮಂಡಳಿ' ಎಂಬ ಒಹು ಪ್ರಭಾವಶಾಲಿ ಸಂಸ್ಥೆಯನ್ನು ಹೊಂದಿದೆ. ಅದು ಅಂತರರಾಷ್ಟ್ರೀಯ ಮಕ್ಕಳ ವರ್ಷದ ಕಾರ್ಯ ಕ್ರಮಕ್ಕೆ ಆರೋಗ್ಯ ಮತ್ತು ಪೌಷ್ಟಿಕತೆ, ವಿದ್ಯಾಭ್ಯಾಸ, ಸಮಾಜ ಕಲ್ಯಾಣ, ಕಾನೂನು, ಪ್ರಚಾರ, ನಿಧಿ–ಸಂಗ್ರಹಣೆ–ಈ ಆರು ರಂಗ ಗಳ ಒಂದು ಕಾರ್ಯಕ್ರಮ ಹೊಂದಿದೆ. ತನ್ನ ರಾಷ್ಟ್ರೀಯ ಘೋಷಣೆ ಯಾಗಿ "ಸಂತುಷ್ಟ ಮಗು–ರಾಷ್ಟ್ರದ ಹೆಮ್ಮೆ" ಎಂದೂ, ಪಾಟ್ಟಿ ಸೂರ್ಯನ ಹಿನ್ನೆಲೆಯಲ್ಲಿಯ ಒಬ್ಬ ಹುಡುಗ ಮತ್ತು ಒಬ, ಹುಡಗಿಯನ್ನು ತನ್ನ ಸಂಕೇತವನ್ನಾಗಿಯೂ ಹೊಂದಿದೆ. ಸೂರ್ಯ ಆರೋಗ್ಯ ಮತ್ತು ಶಕ್ತಿಯನ್ನು ತೋರಿಸುತ್ತದೆ. ಪಾಟಿ ಮಕ್ಕಳ ಭವಿಷ್ಯತ್ತಿನಲ್ಲಿ ವಿದ್ಯೆಯ ಮಹತ್ವದ ಸಂಕೇತ.

ನಾಗರಿಕ ಸಮಾಜದಲ್ಲಿ ಮಕ್ಕಳು :

ಇಂದಿನ ನಾಗರಿಕ ಸಮಾಜ ತನ್ನ ಎಲ್ಲಾ ಗುಂಪುಗಳಿಗೂ ಸೂಕ್ತ ಅನುಕೂಲತೆಗಳನ್ನು ಒದಗಿಸಿಕೊಟ್ಟಿದೆ. ಇದೇ ರೀತಿ ಮಗು ಇನ್ನೂ ತಾಯಿಯ ಗರ್ಭದಲ್ಲಿರುವಾಗಿನಿಂದಲೇ ಅದರ ಪೋಷಣೆ ಪ್ರಾರಂಭವಾಗುತ್ತದೆ. ನಂತರ ಅದರ ಪಾಲನೆ – ಪೋಷಣೆ, ಬಾಲ–

ವಾಡಿ ತರಬೇತಿ, ಪ್ರಾಥಮಿಕ ಶಿಕ್ಷಣ, ಕಡ್ಡಾಯ ಶಿಕ್ಷಣ, ಬಾಲಾಪ ರಾಧಕ್ಕೆ ಸಂಬಂಧಿಸಿದ ಕಾನೂನು, ಬಾಲಕಾರ್ಮಿಕರಿಗೆ ಸಂಬಂಧಿಸಿದ ಕಾನೂನು, ಬಾಲ್ಯವಿವಾಹದ ನಿರ್ಬಂಧ ಕಾನೂನು ಮುಂತಾದ ಅನೇಕ ಕಾನೂನುಗಳನ್ನು, ಕಲ್ಯಾಣ ಕಾರ್ಯಗಳನ್ನು ತಂದಿದೆ. ಜಗತ್ತಿನ ಅನೇಕ ರಾಷ್ಟ್ರಗಳು ಮಕ್ಕಳ ಕಲ್ಯಾಣಕ್ಕೆ, ವಿದ್ಯೆಗೆ, ಬೌದ್ಧಿಕ, ಹಾಗೂ ಮಾನಸಿಕ ಬೆಳವಣಿಗೆಗೆ ಕೋಟಿಗಟ್ಟಲೆ ಹಣ ವ್ಯಯಮಾಡುತ್ತ ಬಂದಿವೆ. ಮಕ್ಕಳನ್ನು ರೋಗಗಳಿಂದ ದುಷ್ಟಶಕ್ತಿಗಳಿಂದ, ದುಷ್ಟಚಟಗಳಿಂದ ರಕ್ಷಿಸಲು ಅನೇಕ ಕಾರ್ಯ ಕ್ರಮ ರೂಪಿಸಲಾಗಿದೆ.ಆದರೂ ಕಾನೂನಿನಲ್ಲಿರುವ ಅನೇಕ ನ್ಯೂನತೆ ಗಳಿಂದಾಗಿ, ಸ್ವಾರ್ಥ ಹಾಗೂ ಲಂಚಕೋರತನದಿಂದಾಗಿ ಇಂದು ಅನೇಕ ಮಕ್ಕಳು ತಮ್ಮ ಹಕ್ಕುಗಳನ್ನು ಪಡೆಯುತ್ತಿಲ್ಲ ಮತ್ತು ಅನೇಕ ಸಮಸ್ಯೆಗಳಿಗೆ ತುತ್ತಾಗಿದ್ದಾರೆ. ಇದನ್ನರಿತ ಸರಕಾರಗಳು ಮತ್ತು ವಿಶ್ವಸಂಸ್ಥೆಯು ಇನ್ನೂ ಅನೇಕ ಕಾರ್ಯಕ್ರಮಗಳನ್ನು ರೂಪಿಸಿಕೊಂಡಿವೆ. ಇವೆಲ್ಲವನ್ನು ಸೂಕ್ತವಾಗಿ ಕಾರ್ಯಗತ ಮಾಡುವ ಹೊಣೆ ಸರಕಾರ, ಸಂಸ್ಥೆಗಳ ಮೇಲಲ್ಲದೆ ಪ್ರೌಢರ ಮೇಲೆಯೂ ಇದೆ.

ಮಕ್ಕಳ ಜಗತ್ತು :

ಪ್ರಾಣಿ - ಪಕ್ಷಿಗಳಂತೆ ಮನುಷ್ಯರಿಗೂ ತಮ್ಮದೇ ಆದ ಜಗತ್ತಿದೆ. ಅಂದರೆ ಅವರು ತಮ್ಮವರು, ತಮ್ಮದು, ಎಂಬುದನ್ನು ಕೇಳಿಕೊಂಡು ತಮಗೆ ಬೇಕಾದ ರೀತಿಯಲ್ಲಿ ಜೀವಿಸುತ್ತಾರೆ. ಮುಂದೆ ಮನುಷ್ಯರಲ್ಲಿ ಲಿಂಗ, ವಯೋಗುಂಪುಗಳಿಗೆ ಅನುಗುಣವಾಗಿ ಹಿರಿಯರ, ಕಿರಿಯರ, ಗಂಡಸರ ಮತ್ತು ಹೆಂಗಸರ ಗುಂಪು

ಗಳನ್ನು ನಿರ್ಮಿಸಿಕೊಂಡು ಅವರು ತಮ್ಮದೇ ಆದ ಆಕಾಂಕ್ಷೆ–ಆಸೆಗಳನ್ನು ಹೊಂದಿರುತ್ತಾರೆ. ಇದರಂತೆ ಮಕ್ಕಳದೂ ಒಂದು ಜಗತ್ತಿದೆ. ಆಯಾ ಗುಂಪಿಗೆ ಆಯಾ ವಯಸ್ಕರೇ ಪ್ರಮುಖರಿದ್ದಂತೆ ಮಕ್ಕಳ ಜಗತ್ತಿನಲ್ಲಿ ಮಕ್ಕಳೇ ಪ್ರಾಧಾನ್ಯ. ಅಲ್ಲಿ ಅವರದೇ ಅಭಿಪ್ರಾಯ, ಮಾತು, ಆದ್ಯತೆ ನಡೆಯಬೇಕು. ಅವರು ತಮ್ಮ ಆಟ-ಪಾಠ, ಮಾತು, ಭಾವನೆ, ಆಸೆ, ಆದ್ಯತೆ, ಅವಶ್ಯಕತೆ ಮುಂತಾದವುಗಳಿಂದಾಗಿ ಹಿರಿಯರಿಂದ ಭಿನ್ನವಾಗಿರುತ್ತಾರೆ. ಆದರೆ ಜಗತ್ತಿನಾದ್ಯಂತ ಮಕ್ಕಳು ಪ್ರೌಢರ ಅಧೀನತೆಯಲ್ಲಿದ್ದಾರೆ. ಇವರು ಕಿರಿಯರು, ಮರುಳರು, ಅನನುಭವಿಗಳು, ಮುಂತಾದ ಅನೇಕ ಬಗೆಯ ಅನಾದರಣೆಗೆ ಗುರಿಯಾಗಿ ಪ್ರೌಢರಿಂದ ಶೋಷಣೆಗೊಳಗಾಗಿದ್ದಾರೆ. ಅಲ್ಲದೆ ತಮ್ಮ ಚಿಕ್ಕವಯಸ್ಸು, ಅಶಕ್ತತೆ, ಆರ್ಥಿಕ ಮತ್ತಿತರ ಅವಲಂಬನೆಯಿಂದಾಗಿ ಅವರು ಪ್ರೌಢರ ಹಂಗಿನಲ್ಲಿರಬೇಕಾಗಿದೆ. ಅಲ್ಲದೆ ಪ್ರೌಢರ ಅನೇಕ ತಪ್ಪುಗಳಿಗೆ, ಸಮಸ್ಯೆಗಳಿಗೆ ತಾವು ನೇರವಾಗಿ ಸಂಬಂಧಿಸಿಲ್ಲದಿದ್ದರೂ ತೊಂದರೆ ಪಡಬೇಕಾಗಿದೆ.

ಸಮಾಜದಲ್ಲಿ ಮಗುವಿನ ಸ್ಥಾನ :

ಮಗು ಮಾನವನ ತಂದೆ, ಮಗುವಿನಿಂದ ಮಾನವ ಕುಲದ ಉದ್ಧಾರವಾಗಬೇಕು, ಮಗು ಉತ್ತಮವಾಗಿ ಬೆಳೆದರೆ ಮಾನವ ಕುಲವೂ ಬೆಳೆಯುತ್ತದೆ–ಎಂಬ ಅನೇಕ ಉಕ್ತಿಗಳನ್ನು ಕೇಳಿದ್ದೇವೆ. ಇದೇ ರೀತಿ, ಮಕ್ಕಳು ಮನೆಗೆ ಚಂದ, ಮಕ್ಕಳಿಲ್ಲದ ಮನೆ ಮಸಣ, ಮಕ್ಕಳು ಬಾಳ ಬಂಗಾರ, ಮುಂತಾಗಿ ವರ್ಣಿಸಿರುವದನ್ನು ಕಾಣುತ್ತೇವೆ. ಅನೇಕ ದಂಪತಿಗಳ ಜೀವನದಲ್ಲಿ ಮಗುವಿನ ಬರು

ವಿಕೆ ಬೆಳಕನ್ನೇ ತಂದಿರುತ್ತದೆ. ಕೇವಲ ಒಂದು ಮಗುವಿನ ಬರುವಿನಿಂದಾಗಿ ಅನೇಕರಿಗೆ ಅನೇಕ ತರಹದ ಸಂಬಂಧಗಳು, ಹಕ್ಕುಗಳು ಬರುತ್ತವೆ. ಇಲ್ಲಿಯವರೆಗೆ ಕೇವಲ ಗಂಡ – ಹೆಂಡರಿದ್ದವರು ಒಂದು ಮಗುವಿನ ಬರುವಿನಿಂದ ತಂದೆ - ತಾಯಿಗಳಾಗುತ್ತಾರೆ. ಮತ್ತು ಅವರ ತಂದೆ–ತಾಯಿಗಳು ಅಜ್ಜ – ಅಜ್ಜಿಯರಾಗುತ್ತಾರೆ. ಇದರಂತೆ ಅವರ ಅಣ್ಣ ತಮ್ಮಂದಿರು, ಅಕ್ಕ ತಂಗಿಯರು ಚಿಕ್ಕವ್ವ, ದೊಡ್ಡವ್ವ, ಸೋದರ ಮಾವ, ಸೋದರತ್ತೆ ಮುಂತಾದ ಸಂಬಂಧಿಗಳ ಸಾಲನ್ನೇ ತರುತ್ತವೆ. ಸಂಪ್ರದಾಯಸ್ಥ ಸಮಾಜದಲ್ಲಿ ಮಕ್ಕಳಿಲ್ಲದ ದಂಪತಿಗಳಿಗೆ ಅನೇಕ ಸಮಸ್ಯೆಗಳು ಬರುತ್ತವೆ. ಮೊದಲನೆಯದಾಗಿ ಈ ದಂಪತಿಗಳು ಬಂಜೆಯರಲ್ಲವೆಂಬುದನ್ನು ತೋರಿಸಬೇಕು. ಈ ಬಂಜೆತನ ಅವರು ಹಿಂದಿನ ಜನ್ಮದಲ್ಲಿ ಮಾಡಿರಬಹುದಾದ ಪಾಪದ ಫಲ ಎಂದು ಭಾವಿಸಲಾಗುತ್ತದೆ. ಅನೇಕ ಸಂದರ್ಭದಲ್ಲಿ ಹೆಂಡತಿಯೇ ಈ ಎಲ್ಲಾ ತಪ್ಪನ್ನು ಹೊರಬೇಕಾಗುತ್ತದೆ. ಕೆಲವೊಂದು ಸಂದರ್ಭದಲ್ಲಿ ಮಕ್ಕಳಿಲ್ಲವೆಂಬ ಕಾರಣದಿಂದ ಆಕೆಯ ಮೇಲೆ ಮತ್ತೊಬ್ಬ ಹೆಂಡತಿಯನ್ನು ತರುವ ಸಂದರ್ಭಗಳೂ ಇವೆ. ಆಸ್ತಿಯನ್ನು ಪಡೆಯಲು, ಪಿತೃಗಳಿಗೆ ಸ್ವರ್ಗಪ್ರಾಪ್ತಿಯಾಗಲು, ವಂಶ ಬೆಳೆಯಲು ಮಕ್ಕಳು ಬೇಕು. ಈ ಎಲ್ಲಾ ಕಾರಣಗಳಿಂದ ಮಕ್ಕಳು ಹೆಚ್ಚಿನ ಸ್ಥಾನಗಳಿಸಿದ್ದಾರೆ. ಆದರೆ ಅನೇಕ ಸಂದರ್ಭಗಳಲ್ಲಿ ಇದು ಕೇವಲ ಕುರುಡು ಪ್ರೀತಿಯಾಗಿದೆ. ಅಲ್ಲದೆ ಈ ಪ್ರೀತಿ ಕೇವಲ ತಮ್ಮ ಮಕ್ಕಳಿಗೆ ಮಾತ್ರ ಸೀಮಿತವಾಗಿದ್ದು ಇತರೆ ಮಕ್ಕಳಿಗೆ ಅನ್ವಯಿಸುವದಿಲ್ಲ. ಅಲ್ಲದೆ ಪ್ರೌಢರು ತಮ್ಮ ಅನೇಕ ತೊಂದರೆ ಮತ್ತು ಸಮಸ್ಯೆಗಳಿಂದಾಗಿ ಮಕ್ಕಳನ್ನು ಅನಾದರ ಮಾಡುವುದು, ದಂಡಿಸುವದು–ಮುಂತಾದವು ಸಂಭವಿಸಿವೆ.

ಪ್ರೌಢರು ಮತ್ತು ಮಕ್ಕಳು :

ಮಕ್ಕಳಿಗೂ ತಮ್ಮತನವಿದೆ. ಆಸೆ ಆಕಾಂಕ್ಷೆಗಳಿವೆ ಎಂಬುದು ಅನೇಕ ಪ್ರೌಢರಿಗೆ ತಿಳಿದಂತೆ ಕಾಣುವುದಿಲ್ಲ. ಮಕ್ಕಳು, ಚಿಕ್ಕವರು, ಅಬಲರು, ಅವಲಂಬಿಗಳು ಎಂಬ ಕಾರಣದಿಂದ ಅವರನ್ನು ಯಾವ ರೀತಿಯಿಂದಲೂ ಗಮನಕ್ಕೆ ತೆಗೆದುಕೊಳ್ಳುವದಿಲ್ಲ, ಮತ್ತು ಅವರಿಗೆ ಆದ್ಯತೆ ನೀಡಿಲ್ಲ. ಅಲ್ಲದೆ ಅನೇಕ ಹಿರಿಯರು ಮಕ್ಕಳನ್ನು ತಮ್ಮಂತೆ ತಿಳಿದು ತಮಗೆ ಬೇಕಾದದ್ದು, ಸರಿಕಂಡದ್ದು ಮಕ್ಕಳಿಗೂ ಸೂಕ್ತವೆಂದು ತಿಳಿದಿದ್ದಾರೆ. ಇದಕ್ಕೆ ತಮ್ಮ ಹಾಗೂ ಮಕ್ಕಳ ಅನಿಸಿಕೆಗಳು, ಅವಶ್ಯಕತೆಗಳು ಬೇರೆ ಬೇರೆಯಾಗಿರುತ್ತವೆ ಎಂಬುದು ಅವರಿಗೆ ತಿಳಿಯದು. ಹೀಗೆ ಮಕ್ಕಳ ಸರ್ವತೋಮುಖಿ ಸಮಸ್ಯೆಗಳ ಅಭ್ಯಾಸ ನಡೆಸಲು ಇಲ್ಲಿ ಮಕ್ಕಳು ಈ ಪ್ರೌಢರ ಜಗತ್ತಿನಲ್ಲಿ ಅನುಭವಿಸುತ್ತಿರುವ ಸುಖ–ಸಂತೋಷಗಳು ಮತ್ತು ಸಮಸ್ಯೆಗಳನ್ನು ಚಿತ್ರಿಸಲು ಪ್ರಯತ್ನಿಸಲಾಗಿದೆ. ಅನೇಕ ಸಂದರ್ಭಗಳಲ್ಲಿ ನಾವು ನಮ್ಮ ಸಾಮಾಜಿಕ, ಧಾರ್ಮಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯಿಂದಾಗಿ ಮಕ್ಕಳನ್ನು ಪ್ರೀತಿಯಿಂದ, ಕರುಣೆಯಿಂದ ನೋಡಿಕೊಳ್ಳಬಹುದು. ಆದರೆ ದಿನ ನಿತ್ಯದಲ್ಲಿ ಮಕ್ಕಳ ಬಗೆಗೆ ನಮ್ಮ ನಡವಳಿಕೆಗಳು ಭಿನ್ನವಾಗುತ್ತವೆ. ಅನೇಕ ಸಂದರ್ಭಗಳಲ್ಲಿ ಪ್ರೌಢರಿಗೆ ಬೇಕಾದದ್ದು ಮಕ್ಕಳಿಗೆ ಬೇಡವಾಗುತ್ತದೆ ಮತ್ತು ಪ್ರೌಢರಿಗೆ ಸರಿಕಂಡದ್ದು ಮಕ್ಕಳಿಗೆ ಸರಿಕಾಣದಿರಬಹುದು. ಹೀಗೆ ನಾನಾ ರಂಗಗಳಲ್ಲಿ ಮಕ್ಕಳು ತಮ್ಮವರು ಎನ್ನುವವರಿಂದಲೇ ಅನೇಕ ಬಗೆಯ ತೊಂದರೆಗಳಿಗೆ ಗುರಿಯಾಗುತ್ತಾರೆ. ಈ ಸಮಸ್ಯೆಗಳನ್ನು ಗುರುತಿಸಿ. ಪ್ರೌಢರು ಯಾವ ರೀತಿಯಲ್ಲಿ ಇವುಗಳನ್ನು ಸರಿಪಡಿಸಿಕೊಳ್ಳಬಹುದೆಂಬುದನ್ನು ಇಲ್ಲಿ ಚರ್ಚಿಸಲಾಗುವುದು.

ಅಧ್ಯಾಯ ೨

ಮಕ್ಕಳು, ಪ್ರೌಢರು ಮತ್ತು ಸಮಸ್ಯೆಗಳು

ಮಕ್ಕಳು ತಮ್ಮ ತಂದೆ ತಾಯಂದಿರ, ತಮಗೆ ಬೇಕಾದವರ್ನ ಪೋಷಣೆಯಲ್ಲಿ ಬೆಳೆಯುತ್ತಿದ್ದರೂ ಅನೇಕ ಸಮಸ್ಯೆಗಳನ್ನು ಹೊಂದಿದ್ದಾರೆ. ಅಂತಹ ಸಮಸ್ಯೆಗಳು ಮಕ್ಕಳ ಆರೋಗ್ಯ, ಆಹಾರ, ವಿದ್ಯೆ, ಮನೋರಂಜನೆ, ಬೌದ್ಧಿಕ ಹಾಗೂ ಮಾನಸಿಕ ಬೆಳವಣಿಗೆ ಮುಂತಾದ ರಂಗದಲ್ಲಿವೆ. ಈ ಅನೇಕ ಸಮಸ್ಯೆಗಳಿಗೆ ಒಂದು ರೀತಿಯಲ್ಲಿ ಸಮಾಜ, ಕಾನೂನುಗಳು, ಅಡೆತಡೆಯಾಗಿರುವಂತೆ ಸಮಾಜದಲ್ಲಿನ ಪ್ರೌಢರೂ ತಮ್ಮ ಅಜ್ಞಾನ, ಆಲಸಿಕೆ, ಮೂಢ ನಂಬಿಕೆ, ಮುಂತಾದವುಗಳಿಂದ ಅಡ್ಡಿಯಾಗಿದ್ದಾರೆ. ಪ್ರೌಢರು ತಮ್ಮ ಹೊಣೆಯನ್ನರಿತು, ಸೂಕ್ತ ತಿಳುವಳಿಕೆಯಿಂದ ನಡೆದು ಕೊಂಡಿದ್ದರೆ ಮಕ್ಕಳ ಈ ಸಮಸ್ಯೆಗಳನ್ನು ಹೇಗೆ ಪರಿಹರಿಸಬಹುದಿದ್ದಿತೆಂಬುದನ್ನು ತಿಳಿಯೋಣ.

ವಿದ್ಯಾಭ್ಯಾಸ

ಒಂದು ಪೀಳಿಗೆಯು ತನ್ನಲ್ಲಿಯ ಸಕಲ ಜ್ಞಾನ ಮತ್ತು ಅನುಭವವನ್ನು, ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ನೀಡಲು ವಿದ್ಯೆ ಅವಶ್ಯಕ. ಇದರಿಂದ ಮುಂದಿನ ಪೀಳಿಗೆ ಆ ಸಂಸ್ಕೃತಿಯಲ್ಲಿ ಉತ್ತಮ ಪ್ರಜೆಗಳಾಗಿ ಜೀವಿಸಲು ಸಹಾಯವಾಗುತ್ತದೆ ಮತ್ತು ಹಿರಿಯ ಪೀಳಿಗೆಯೂ ತನ್ನಲ್ಲಿನ ಜ್ಞಾನ ಸಂಪತ್ತನ್ನು ನೀಡಿದ್ದರಿಂದ ಸಮಾಧಾನ ಪಡುವುದರ ಜೊತೆಗೆ ತಮ್ಮ ಸಂಸ್ಕೃತಿ ಉತ್ತಮ ರೀತಿಯಲ್ಲಿ ಮುಂದುವರೆದುಕೊಂಡು ಹೋಗುವುದೆಂಬ ಭರವಸೆ

ಯನ್ನು ಪಡೆಯುತ್ತದೆ. ಆದ್ದರಿಂದ ವಿದ್ಯಾರಂಗದಲ್ಲಿ ಹಿರಿಯ ಪೀಳಿಗೆಯ ಪಾತ್ರ ಹಿರಿದು. ಹಿಂದಿನ ಕಾಲದಲ್ಲಿ ತಮ್ಮ ಮಕ್ಕಳಿಗೆ ತಾವೇ ಜೀವನ ಮಾರ್ಗವನ್ನು, ತಮ್ಮ ಕುಲಕಸುಬನ್ನು ಕಲಿಸು ತ್ತಿದ್ದಾಗ ಅನೇಕ ಸಮಸ್ಯೆಗಳಿರಲಿಲ್ಲ. ಇಂದು ಆಧುನಿಕ, ನಾಲ್ಕು ಗೋಡೆಯ ಮಧ್ಯದ ಶಿಕ್ಷಣವು ಅನೇಕ ಸಮಸ್ಯೆಗಳನ್ನು ತಂದಿದೆ. ಇದಕ್ಕೆ ಶಾಲೆಗಳು, ಉಪಾಧ್ಯಾಯರು, ಶಾಲೆಯ ವಾತಾವರಣ, ಕಲಿಯುವ ವಿಷಯ, ಕಲಿತ ವಿದ್ಯೆಯ ಉಪಯೋಗ ಮುಂತಾದವು ಕಾರಣವಾಗಿವೆ.

ಮೊದಲನೆಯದಾಗಿ, ಅನೇಕ ಜನ ತಂದೆ – ತಾಯಂದಿರಿಗೆ ತಮ್ಮ ಮಕ್ಕಳು ಇಂತಹ ಶಾಲೆಗೇ ಹೋಗಬೇಕು, ಇಂತಹದೇ ವಿಷಯವನ್ನು ತೆಗೆದುಕೊಳ್ಳಬೇಕು ಎಂಬ ಆಸೆ ಇರುತ್ತದೆ. ಇದಕ್ಕೆ ಅವರ ಹಿನ್ನಲೆ, ಮನೋಭಾವನೆ, ಘನತೆ ಮುಂತಾದವೇ ಕಾರಣ ವಾಗಿರಬಹುದು. ಇಂದು ಡೊನೇಷನ್ ತೆಗೆದುಕೊಳ್ಳುವ, ಹೆಚ್ಚು ಫೀ ಕೇಳುವ, ಮನೆಯಿಂದ ದೂರವಿರುವ, ಶಾಲೆಯ ಸಮವಸ್ತ್ರ ಮುಂತಾದ ಖರ್ಚಿರುವ ಶಾಲೆಗೇ ತಮ್ಮ ಮಕ್ಕಳನ್ನು ಕಳುಹಿಸುವ ಆಸೆ ಈ ತಂದೆ ತಾಯಿಗಳಿಗೆ. ಆದರೆ ತನ್ನ ನೆರೆಹೊರೆಯವರು ಅಥವಾ ತನ್ನ ಅಕ್ಕ, ಅಣ್ಣನಿರುವ ಶಾಲೆಗೇ ಹೋಗುವ ಆಸೆ ಮಕ್ಕಳಿಗೆ. ಮುಂದೆ ತಮ್ಮ ಮಕ್ಕಳು ಹೆಚ್ಚು ಹಣ, ಅಧಿಕಾರ ಇರುವ ನೌಕರಿಯನ್ನೇ ಮಾಡಬೇಕು ಎಂಬ ಆಸೆ ಇಟ್ಟುಕೊಂಡು ಮಕ್ಕಳನ್ನು ಇಂತಹದೇ ವಿಷಯವನ್ನು ಓದಬೇಕೆಂದು ಬಲವಂತ ಮಾಡುತ್ತಾರೆ.ಮಕ್ಕಳಿಗೆ ಈ ವಿಷಯದಲ್ಲಿ ಆಸಕ್ತಿ ಇರದಿದ್ದರೆ ಅವರು ತಮ್ಮ ವಿದ್ಯಾಭ್ಯಾಸದಲ್ಲಿ ಅನಾದರ ತೋರಬಹುದು. ಅನೇಕ ಸಾರಿ ಅವರು ಪದವಿ ಮಟ್ಟಕ್ಕಿರಲಿ ನಡುವೆಯೇ ತಮ್ಮ ವಿದ್ಯಾಭ್ಯಾಸವನ್ನು

ಬಿಟ್ಟು ಬಿಡಬಹುದು. ಇಲ್ಲಿ ತಂದೆ-ತಾಯಿಗಳು ತಿಳಿಯಬೇಕಾದು ದೆಂದರೆ ಮಕ್ಕಳು ಅಭಿರುಚಿ ಹೊಂದಿರುವ ಯಾವುದೇ ವಿಷಯು ವಿರಲಿ ಅದನ್ನೇ ಆಸ್ಥೆವಹಿಸಿ ಕಲಿಯುವಂತೆ ಮಾಡಲು ಸೂಕ್ತ ಅವಕಾಶ, ಗಮನ, ವ್ಯವಸ್ಥೆ ಮಾಡಿಕೊಡುವುದು. ಏಕೆಂದರೆ ಇಂದು ವೈದ್ಯರು, ಇಂಜಿನಿಯರ್ ಆದ ಅನೇಕರು ತಮ್ಮ ವೃತ್ತಿಯಲ್ಲಿ ಮತ್ತು ಜೀವನದಲ್ಲಿ ಸುಖವಾಗಿದ್ದಾರೆಂದು ಹೇಳಲಿಕ್ಕಾಗುವದಿಲ್ಲ. ಉತ್ತಮ ಸಂಗೀತಗಾರರು, ಚಿತ್ರಕಾರರು, ಉಪಾಧ್ಯಾಯರು ಮುಂತಾದವರು ಜೀವನದಲ್ಲಿ ಸಾಕಷ್ಟು ಹಣ, ಹೆಸರು ಮತ್ತು ಜೀವನದ ಸುಖ ಮತ್ತು ಶಾಂತಿಯನ್ನು ಪಡೆದವರಿದ್ದಾರೆ. ಆದ್ದ ರಿಂದ ಮಕ್ಕಳು ತಮಗೆ ಅಭಿರುಚಿ ಇರುವ ವಿಷಯಗಳನ್ನು ಕಲಿ ಯಲು ತಂದೆ ತಾಯಿಗಳು ಉತ್ತಮ ಅವಕಾಶಗಳನ್ನು ಒದಗಿಸಿ ಕೊಡಬೇಕು.

ಇಂದಿನ ಶೈಕ್ಷಣಿಕ ಸಮಸ್ಯೆಗಳೆಲ್ಲವು ಒಂದು ರೀತಿಯಲ್ಲಿ ಪ್ರೌಢರು ಸೃಷ್ಟಿಸಿದ ಸಮಸ್ಯೆಗಳು. ಇಂದಿನ ಪಠ್ಯಪುಸ್ತಕಗಳು, ಭಾಷಾಮಾಧ್ಯಮ, ಬೋಧನಾಕ್ರಮ ಎಲ್ಲವೂ ಇವರ ಸಮಸ್ಯೆ ಗಳೇ. ದೇಶ ಕೂಡ ತನ್ನ ಬಲಾ-ಬಲದ ಕಲ್ಪನೆ ಇಲ್ಲದೆ ಕಡ್ಡಾಯ ಶಿಕ್ಷಣ ಪದ್ಧತಿಯನ್ನು ಜಾರಿಗೆ ತಂದಿದೆ. ಒಂದು ಕಡೆ ಸಮಾಜಕ್ಕೆ ವಿದ್ಯೆಯ ಉಪಯುಕ್ತತೆಯ ಕಲ್ಪನೆ ಇಲ್ಲ. ಇನ್ನೊಂದೆಡೆ ಸ ಕಾರಕ್ಕೆ ಇದರಿಂದ ಬರುವ ಖರ್ಚಿನ ಕಲ್ಪನೆ ಇಲ್ಲ. ಮಕ್ಕಳು ಸೂಕ್ತ ಸಂಖ್ಯೆಯಲ್ಲಿ ಶಾಲೆಗೆ ಬರುವಂತೆ ಮಾಡಲು, ಅವರು ಶಾಲೆಗೆ ಬಂದರೆ ಅವರಿಗೆ ಬೇಕಾದ ಶಾಲಾ ಕೊಠಡಿ; ಕೂರುಮಣೆ, ಪುಸ್ತಕ, ಉಪಾಧ್ಯಾಯರುಗಳ ವ್ಯವಸ್ಥೆ ಇಲ್ಲ. ಇದ್ದ ವ್ಯವಸ್ಥೆಯೂ ಸಮ ರ್ಪಕವಾಗಿ ಕಾರ್ಯಮಾಡುತ್ತಿಲ್ಲ. ಈ ಕಾರಣಗಳಿಂದ ಮಕ್ಕಳಿಗೆ

ಯೋಗ್ಯ ಶಾಲಾಶಿಕ್ಷಣ ಸಿಗದಂತಾಗಿದೆ. ಶಾಲೆಗೆ ಬರುವ ಮಕ್ಕಳಿಗೂ ಅಲ್ಲಿಯ ಜೀವನ ಸೆರೆಮನೆವಾಸದಂತಾಗುತ್ತದೆ. ಮುಂದೆ ಅವರು ಯಾವುದಾದರೂ ಕಾರಣ ನೀಡಿ ಶಾಲೆಯನ್ನು ಬಿಡುತ್ತಾರೆ. ಇದರಿಂದ ಸಮಾಜದಲ್ಲಿ ಅನೇಕ ಸಮಸ್ಯೆಗಳು ಹುಟ್ಟಿ ಕೊಂಡಿವೆ. ಮೊದಲನೆಯದಾಗಿ, ಸೂಕ್ತ ವಯಸ್ಸಿನಲ್ಲಿ ಮಕ್ಕಳು ಶಾಲೆಯಲ್ಲಿದ್ದರೆ ಅವರ ಆರೋಗ್ಯ, ಬುದ್ಧಿಬೆಳವಣಿಗೆ, ವಿದ್ಯೆ ಮುಂತಾದವನ್ನು ಕಾಪಾಡಬಹುದು ಅಥವಾ ನೀಡಬಹುದು. ಆದರೆ ಅವರು ಶಾಲೆಗೆ ಬರದಿದ್ದರೆ ಈ ಸೇವೆಗಳು ಅವರಿಗೆ ಸಿಗ ಲಾರವು. ಅಲ್ಲದೆ ಸಮಾಜದಲ್ಲಿ ಅನಕ್ಷರಸ್ಥರ, ಅಸಂಸ್ಕೃತರ ಸಂಖ್ಯೆ ಹೆಚ್ಚಾಗುತ್ತದೆ. ಆದ್ದರಿಂದ ಸರಕಾರ ಮತ್ತು ಸಮಾಜ ಈ ಕಡೆ ಹೆಚ್ಚು ಗಮನ ನೀಡಬೇಕು. ಆರು ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ಬಾಲವಾಡಿಗಳ ಸೇವೆ ಸಿಗಬೇಕು. ನಂತರ ಪ್ರಾಥಮಿಕ ಶಿಕ್ಷಣ ಸಿಗಬೇಕು. ಇಲ್ಲಿ ಸೂಕ್ತ ಆಟ ಪಾಠದ, ಔಷಧ, ಊಟದ ವ್ಯವಸ್ಥೆಯಾಗಬೇಕು. ಹೀಗೆ ಚಿಕ್ಕ ವಯಸ್ಸಿನಲ್ಲಿ ಮಕ್ಕಳನ್ನು ಕ್ರಮ ವರಿತ ಜೀವನಕ್ಕೆ ಗುರಿಮಾಡುವುದರಿಂದ ಅವರು ಮುಂದೆ ಉತ್ತಮ ವ್ಯಕ್ತಿಗಳಾಗಲು ಸಹಾಯವಾಗುತ್ತದೆ.

ಇದೇ ರೀತಿ ಶಾಲೆಯ ವಾತಾವರಣವನ್ನು ಪ್ರೌಢರ ಜಗತ್ತಿ ನಿಂದ ದೂರವಿಡಬೇಕು. ಇಲ್ಲಿಯ ಉಪಾಧ್ಯಾಯರು ಮತ್ತಿತರ ನೌಕರರು ತಮ್ಮ ಸ್ವಂತದ ಸಮಸ್ಯೆಗಳನ್ನು, ಉದ್ದೇಶಗಳನ್ನು ಶಾಲೆಯ ಕಾರ್ಯದಲ್ಲಿ ಬೆರಸಬಾರದು. ಅವರು ಉತ್ತಮರು, ತರಬೇತಿ ಹೊಂದಿದವರು, ಸೂಕ್ತ ನಡವಳಿಕೆಯವರಾಗಿರಬೇಕು. ಒಂದು ವರ್ಷ ಪೈರು ಕೆಟ್ಟರೆ ಆ ವರ್ಷದ ಪೈರು ಮಾತ್ರ ಕೆಡುತ್ತದೆ. ಶಾಲೆಯಲ್ಲಿ ಒಂದು ವರ್ಷ ಮಕ್ಕಳು ಕೆಟ್ಟರೆ ಅವರ ಇಡೀ ಜೀವನದ

ಮೇಲೆ ಪರಿಣಾಮ ಬೀರಬಲ್ಲದು ಎಂಬುದನ್ನು ಶಿಕ್ಷಕರು ಗಮನ ದಲ್ಲಿಡಬೇಕು. ಆದರೆ ಅನೇಕ ಶಿಕ್ಷಕರು ಶಾಲೆಯ ಕೆಲಸದ ಜೊತೆಗೆ ಹೊಲಗೆಲಸ, ವ್ಯಾಪಾರ, ರಾಜಕೀಯ ಮುಂತಾದವುಗಳಲ್ಲಿ ತೊಡಗಿ ಶಿಕ್ಷಣ ಪ್ರಪಂಚಕ್ಕೆ ದೊಡ್ಡ ಅನ್ಯಾಯವನ್ನೇ ಮಾಡುತ್ತಿದ್ದಾರೆ. ಈ ಕಡೆ ಅವರು ಹೆಚ್ಚು ಗಮನ ನೀಡಬೇಕು. ಚಿಕ್ಕ ವಯಸ್ಸಿನ ಮಕ್ಕಳು ಮೊದಲ ಬಾರಿಗೆ ತಮ್ಮ ಮನೆಯನ್ನು, ನೆರೆ ಹೊರೆಯವರು ಮತ್ತು ಅನೌಪಚಾರಿಕ ವಾತಾವರಣವನ್ನು ಬಿಟ್ಟು ಶಾಲೆಯಲ್ಲಿ ಉಪಾಧ್ಯಾಯರು ಮತ್ತು ಶಾಲೆಯ ವಾತಾವರಣಕ್ಕೆ ಬರುತ್ತಾರೆ. ಆಗ ಅವರಿಗೆ ಉಪಾಧ್ಯಾಯರೇ ಮಾರ್ಗದರ್ಶಿ, ಅನುಕರಣೀಯ ವ್ಯಕ್ತಿತ್ವ. ಹೀಗೆ ತನ್ನವರು ಎನ್ನುವವರನ್ನು ಬಿಟ್ಟು ಮೊಟ್ಟಮೊದಲಬಾರಿಗೆ ಹೊರಗಿನವರೊಡನೆ ಮಕ್ಕಳ ಸಂಬಂಧ ಹೊಂದುವವರು ಉತ್ತಮನಲ್ಲದಿದ್ದರೆ, ಮಾರ್ಗದರ್ಶಿಯಾಗದಿದ್ದರೆ ಸಮಾಜಕ್ಕೆ ಹಾನಿಯಾಗುತ್ತದೆ. ಆದರೆ ಮಕ್ಕಳು ಈ ಪ್ರೌಢರ ಚಟುವಟಿಕೆಯಲ್ಲಿ ಸಿಕ್ಕುಬಿಡುತ್ತಾರೆ.

ಇಂದಿನ ಶಾಲಾಜೀವನ ಶೋಚನೀಯವಾಗಿದೆ. ನ್ಯಾಯ, ನೀತಿ, ಕಾಲದ ಮಹತ್ವ ತಿಳಿಯದ ಉಪಾಧ್ಯಾಯರು ಮತ್ತು ಸಮಾಜ ಮಕ್ಕಳನ್ನು ಅಡ್ಡ ದಾರಿಗೆಳೆದಿದ್ದಾರೆ. ತಾವೇ ಆಚರಿಸದ, ನಂಬದ ವಿಷಯಗಳನ್ನು ಮಕ್ಕಳಿಗೆ ಪಾಠ ಹೇಳುತ್ತಾರೆ. ಇದು ಅನರ್ಥಕ್ಕೆ ಕಾರಣವಾಗುತ್ತದೆ. ಸಮಾಜ ಮತ್ತು ಸರಕಾರಗಳು ಈ ಕಡೆ ಗಮನ ನೀಡಬೇಕು. ಉಪಾಧ್ಯಾಯ ವೃತ್ತಿಯಲ್ಲಿ ಆಸ್ಥೆ ಉಳ್ಳವರಿಗೆ ಮಾತ್ರ ಈ ವೃತ್ತಿಯಲ್ಲಿ ಪ್ರವೇಶಿಸುವಂತೆ ಮಾಡಬೇಕು.

ಔಷಧೋಪಚಾರ :

ಇಂದು ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವಂತಹ ದೇಶಗಳಲ್ಲಿ ಹೆಚ್ಚು ಹೆಚ್ಚು ಮಕ್ಕಳು ಹುಟ್ಟಿದ ವರ್ಷವೇ ಸಾಯು

ತ್ತವೆ. ನಂತರ ಶೇಕಡಾ ಹದಿನ್ನಾಲ್ಕರಷ್ಟು ಅಧಿವಯಸ್ಸು ಮುಗಿಸುವ ಮುನ್ನ ಸಾಯುತ್ತವೆ. ಇನ್ನೂ ಅನೇಕ ಮಕ್ಕಳು ಕುರುಡು, ಕಿವುಡು,ಪೋಲಿಯೋ, ಕ್ಷಯ. ಅಸ್ತಮ ಮುಂತಾದ ತೊಂದರೆಗಳಿಗೆ ಗುರಿಯಾಗುತ್ತವೆ. ಇದಕ್ಕೆಲ್ಲಾ ಹೊಣೆ ಪ್ರೌಢರೇ. ಮೊದಲನೆಯದಾಗಿ ತಂದೆ-ತಾಯಿಗಳು ಹೊಣೆಯಾಗುತ್ತಾರೆ. ಎಲ್ಲಾ ಕೆಲಸ ಮಾಡಲು, ವ್ಯವಹಾರ ಮಾಡಲು ಒಂದು ಅರ್ಹತೆ, ತರಬೇತಿ ಬೇಕು. ಆದರೆ ನಮ್ಮ ದೇಶದಲ್ಲಿ ಮದುವೆಯಾಗಿ ಮಕ್ಕಳನ್ನು ಹೆರಲು ಯಾವ ಅರ್ಹತೆಯೂ ಬೇಕಾಗಿಲ್ಲ. ಗಂಡಸು ಎಂತಹ ದಡ್ಡನಿರಲಿ, ಹೆಡ್ಡನಿರಲಿ, ತನ್ನ ಮಕ್ಕಳಿಗೆ, ಹೆಂಡತಿಗೆ ದುಡಿದು ಹಾಕುವ ಶಕ್ತಿ ಇರಲಿ, ಇಲ್ಲದಿರಲಿ ಯಾರಾದರು ಕನ್ಯಾ ಪಿತೃಗಳು ಹೆಣ್ಣು ಕೊಡಲು ಮುಂದೆ ಬರುತ್ತಾರೆ. ಅನೇಕ ಸಂದರ್ಭಗಳಲ್ಲಿ ಅವನು ಬುದ್ಧಿ ವಿಕಲ್ಪನಿರಬಹುದು, ಬೇಜವಾಬ್ದಾರಿಯ ಮನುಷ್ಯನಿರಬಹುದು, ಅವನಿಗೆ ಮದುವೆ ಮಾಡುತ್ತಾರೆ. ಈ ಹೊಣೆಗೇಡಿ ಮುಂದೆ ತನ್ನ ಮಕ್ಕಳನ್ನು ಸೂಕ್ತವಾಗಿ ರಕ್ಷಿಸಲಾರನು. ಎರಡನೆಯದಾಗಿ, ತಂದೆ ತಾಯಿಗಳ ಚಿಕ್ಕವಯಸ್ಸು, ಅನಕ್ಷರತೆ, ಅನುಭವ ಹೀನತೆ ಅವರ ಮಕ್ಕಳ ಅನೇಕ ಸಮಸ್ಯೆಗಳಿಗೆ ಕಾರಣವಾಗಿದೆ. ಇಂದು ಮದುವೆಮಾಡಲು ಸೂಕ್ತ ವಯಸ್ಸೆಂಬುದಿಲ್ಲ. ಸರಕಾರ ವಿವಾಹ ವಯೋಮಿತಿಗೆ ಸಂಬಂಧಿಸಿದ ಕಾನೂನು ತಂದಿದ್ದರೂ, ನಮ್ಮ ಅಜ್ಞಾನ, ಆರ್ಥಿಕ ತೊಂದರೆ, ಮೂಢನಂಬಿಕೆ, ಸಂಪ್ರದಾಯ ಮುಂತಾದವುಗಳಿಂದಾಗಿ ಅವರಿಗೆ ಕಿರಿಯ ವಯಸ್ಸಿನಲ್ಲೇ ಮದುವೆ ಮಾಡುತ್ತೇವೆ. ತಮ್ಮನ್ನು ತಾವು ನೋಡಿಕೊಳ್ಳುವುದೂ ತಿಳಿಯದ ಈ ಕಿರಿಯ ವಯಸ್ಸಿನವರು ಮದುವೆಯಾಗಿ ಮಕ್ಕಳನ್ನು ಹೆರುವುದರಿಂದ, ಅನುಭವ ಸಾಲದೆ ತಮ್ಮ ಮಕ್ಕಳನ್ನು ಅವು ಹುಟ್ಟಿದ ಕೆಲವೇ ದಿನಗಳಲ್ಲಿ ಅಥವಾ ತಿಂಗಳುಗಳಲ್ಲಿ ಕಳೆದುಕೊಳ್ಳು

ತ್ತಾರೆ. ತಮ್ಮ ಆರೋಗ್ಯದ ಜೊತೆಗೆ ಮಕ್ಕಳ ಆರೋಗ್ಯವೂ ಕೆಡುವುದರಿಂದ ಇಬ್ಬರ ಜೀವನವೂ ನರಕಯಾತನೆಯಾಗುತ್ತದೆ. ಆದ್ದರಿಂದ ಸೂಕ್ತ ಮಾನಸಿಕ, ದೈಹಿಕ ಬೆಳವಣಿಗೆಯ ನಂತರ ಮತ್ತು ಆರ್ಥಿಕ ಸ್ವಾವಲಂಬನೆ ಪಡೆದ ನಂತರ ಮಕ್ಕಳಿಗೆ ಮದುವೆಮಾಡಬೇಕೆಂಬ ಬುದ್ಧಿ ಹಿರಿಯರಿಗೆ ಬರಬೇಕು. ಆದರೆ ತಮ್ಮದೇ ಆದ ಸಮಸ್ಯೆಗಳಿಂದ, ನಂಬಿಕೆಗಳಿಂದ ಪ್ರಭಾವಿತರಾದ ಪೌಢರು ಇದಾವುದನ್ನು ಗಮನಿಸಲಾರರು.

ನಮ್ಮ ಸರಕಾರ ಕೂಡ ಮಕ್ಕಳ ಆರೋಗ್ಯದ ಬಗ್ಗೆ ಸಾಕಷ್ಟು ಆಸ್ಥೆವಹಿಸಿಲ್ಲ. ಮಕ್ಕಳ ಅನೇಕ ರೋಗಗಳನ್ನು ತಡೆಗಟ್ಟಲು ಇರುವ ಪ್ರತಿರೋಧಕ ಚುಚ್ಚು ಮದ್ದುಗಳು ಪುಕ್ಕಟೆಯಾಗಿ ಪ್ರತಿ ಗ್ರಾಮದಲ್ಲಿಯೂ ಸಿಗುವ ವ್ಯವಸ್ಥೆ ಮಾಡಬೇಕು. ಕಡ್ಡಾಯವಾಗಿ ಮಕ್ಕಳನ್ನು ಇಂತಹ ಚಿಕಿತ್ಸೆಗೆ ಒಳಪಡಿಸಬೇಕೆಂದು ತಂದೆ-ತಾಯಿಗಳಿಗೆ ತಿಳಿಸಬೇಕು. ಇದೇ ರೀತಿ ನವ ದಂಪತಿಗಳಿಗೆ ಮಕ್ಕಳ ಆರೋಗ್ಯ, ಆರೈಕೆಗಳ ಬಗ್ಗೆ ಸೂಕ್ತ ತಿಳುವಳಿಕೆ ನೀಡುವ ವ್ಯವಸ್ಥೆ ಮಾಡಬೇಕು. ನೆರೆಹೊರೆ, ಶಾಲೆ ಮುಂತಾದ ಕಡೆ ಕೂಡಲೇ ಪ್ರಾಥಮಿಕ ಆರೋಗ್ಯ ಸಲಕರಣೆಗಳು, ಚಿಕಿತ್ಸೆ ಸಿಗುವಂತೆ ಮಾಡಬೇಕು.

ಮಕ್ಕಳು ಮತ್ತು ಆಹಾರ:

ದೇಹದ ಬೆಳವಣಿಗೆಗೆ, ಉತ್ತಮ ಆರೋಗ್ಯಕ್ಕೆ ಬೇಕಾಗುವ ಅವಶ್ಯಕ ವಸ್ತುಗಳಲ್ಲಿ ಆಹಾರವು ಒಂದು. ಆದರೆ ವಿವಿಧ ಸಮಾಜಗಳು ತಮ್ಮ ಬಡತನ, ಅಜ್ಞಾನ ಮತ್ತು ಮೂಢನಂಬಿಕೆಯಿಂದಾಗಿ ತಮ್ಮ ಮಕ್ಕಳಿಗೆ ಸೂಕ್ತ ಆಹಾರವನ್ನು ನೀಡದೆ ಅವರಿಗೆ ದೈಹಿಕ

ವಾದ ಅನೇಕ ತೊಂದರೆಗಳನ್ನು ತಂದಿವೆ. ಹಿಂದುಳಿದ ಅನೇಕ ದೇಶಗಳಲ್ಲಿ ವಿದ್ಯಾವಂತರು, ಸುಶಿಕ್ಷಿತರು ಎನ್ನುವವರಿಗೂ ಸಮತೋಲನವಾದ ಆಹಾರ ಮತ್ತು ಅದರ ಆವಶ್ಯಕತೆಯ ಬಗ್ಗೆ ಸರಿಯಾದ ತಿಳುವಳಿಕೆ ಇರುವದಿಲ್ಲ. ಆಹಾರದಲ್ಲಿಯ ಪೌಷ್ಟಿಕಾಂಶ ನಾಶವಾಗದಂತೆ ಸಿದ್ಧಪಡಿಸುವದು, ಕಾಯ್ದಿಡುವದು, ರೋಗ ತರುವ ಕ್ರಿಮಿಗಳಿಂದ ಸಂರಕ್ಷಿಸುವದು ಮತ್ತು ಅದನ್ನು ಸೂಕ್ತ ರೀತಿಯಲ್ಲಿ, ಅಳತೆಯಲ್ಲಿ, ಸಮಯಕ್ಕನುಸಾರವಾಗಿ ತಿನ್ನಿಸುವದು ಅನೇಕರಿಗೆ ತಿಳಿಯದು. ಇದರಿಂದಾಗಿ ಅದೆಷ್ಟೋ ಸಂದರ್ಭದಲ್ಲಿ ಯೋಗ್ಯವಾಗಿ ಒದಗಿಸದೇ ಇದ್ದ ಆಹಾರ ಜೀವಕ್ಕೆ ತೊಂದರೆಯನ್ನು ತರಬಹುದು. ಆದ್ದರಿಂದ ಆಹಾರದ ಬಗೆಗೆ, ಅದರಲ್ಲೂ ಮುಗ್ಧ ಮಕ್ಕಳ ಆಹಾರ ಮತ್ತು ಅದನ್ನು ನೀಡುವ ಬಗೆಗೆ ನಮ್ಮಲ್ಲಿರುವ ಕೆಲವೊಂದು ತೊಂದರೆಗಳನ್ನು, ನಂಬಿಕೆಗಳನ್ನು ಇಲ್ಲಿ ಚರ್ಚೆಗೆ ತೆಗೆದುಕೊಳ್ಳೋಣ.

ಅನೇಕ ಪ್ರೌಢರಿಗೆ ತಾವು ತಿನ್ನುವ ಆಹಾರದ ಬಗೆಗೆ ಹೆಚ್ಚಿಗೆ ತಿಳಿಯದು. ಹೆಚ್ಚೆಂದರೆ ಅದರ ರುಚಿ, ಬಣ್ಣ ಮತ್ತು ಹಳಸಿದೆಯೋ ಅಥವಾ ತಿನ್ನಲು ಯೋಗ್ಯವಾಗಿದೆಯೋ ಎಂದು ತಿಳಿಯುವಷ್ಟು ಪ್ರಜ್ಞೆ ಇರುತ್ತದೆ. ಆದರೆ ಆಹಾರದಲ್ಲಿನ ಅನ್ನಾಂಗಗಳು, ಲೋಹ ಮತ್ತು ರಾಸಾಯನಿಕಗಳ ಬಗ್ಗೆ ತಿಳಿಯದು. ಕೆಲವೊಂದು ಸಾರಿ ಅವರು ಯಾವುದಾದರೂ ನಂಬಿಕೆಗೆ, ಸಂಪ್ರದಾಯಕ್ಕೆ ಅನುಗುಣವಾಗಿ ಆಹಾರ ತಯಾರಿಸುತ್ತಾರೆ ಮತ್ತು ತಿನ್ನುತ್ತಾರೆ. ಆದರೆ ಬೆಳೆಯುವ ಮಕ್ಕಳಿಗೆ ಪ್ರೌಢರಿಗೆ ಬೇಕಾಗುವ ಆಹಾರಕ್ಕಿಂತ ಬೇರೆಯೇ ಆದ ಆಹಾರ ಬೇಕಾಗುತ್ತದೆ. ಈ ಬಗ್ಗೆ ಅವರಿಗೆ ತರಬೇತಿ, ತಿಳುವಳಿಕೆ ನೀಡುವದು ಸೂಕ್ತ.

ಅನೇಕರಲ್ಲಿ ಉತ್ತಮ ಆಹಾರವೆಂದರೆ ದುಬಾರಿ ಅಥವಾ ವೆಚ್ಚದ ಆಹಾರವೆಂಬ ಭಾವನೆ ಇದೆ. ಆದರೆ ಉತ್ತಮ ಆಹಾರವೆಂದರೆ ಸಮತೋಲನವಾದ ಆಹಾರ; ಅಂದರೆ ದೇಹಕ್ಕೆ ಬೇಕಾಗುವ ಕೊಬ್ಬು, ಪಿಷ್ಟಪದಾರ್ಥ, ಅನ್ನಾಂಗಗಳು, ಲವಣಗಳು ಲೋಹಗಳು ಇರುವ ಆಹಾರ. ಈ ವಸ್ತುಗಳು ಕೆಲವೊಂದು ಆಹಾರ ಪದಾರ್ಥಗಳಲ್ಲಿ ಹೆಚ್ಚಿಗೆ ಇರಬಹುದು, ಕೆಲವು ಪದಾರ್ಥಗಳಲ್ಲಿ ಕಡಿಮೆ ಅಥವಾ ಏನೂ ಇಲ್ಲದೇ ಇರಬಹುದು. ಆದ್ದರಿಂದ ಇವು ಎಲ್ಲಿವೆ, ಎಷ್ಟಂಶದಲ್ಲಿವೆ, ಯಾವ ರೂಪದಲ್ಲಿವೆ ಎಂಬುದನ್ನು ತಿಳಿದು ಅಂತಹ ಆಹಾರ ಪದಾರ್ಥಗಳನ್ನು ಉಪಯೋಗಿಸುವುದರಿಂದ ದೇಹಕ್ಕೆ ಬೇಕಾದ ಅವಶ್ಯಕ ವಸ್ತುಗಳನ್ನು ಪಡೆಯಬಹುದು. ಆದರೆ ಇದಾವುದನ್ನು ತಿಳಿಯದೆ ತಮ್ಮದೆ ಆದ ಮೂಢ ನಂಬಿಕೆ, ಕೃತಕ ಘನತೆ ಮುಂತಾದವುಗಳಿಂದ ಪ್ರೌಢರು ತಪ್ಪು ಆಹಾರಗಳನ್ನು ತಿನ್ನುತ್ತಾರೆ ಮತ್ತು ಮಕ್ಕಳಿಗೂ ತಿನ್ನಿಸುತ್ತಾರೆ. ಉದಾಹರಣೆಗೆ ಅಕ್ಕಿಯನ್ನು ಹೆಚ್ಚು ಪಾಲಿಶ್ ಮಾಡುವುದು. ತರಕಾರಿಗಳ ಮೇಲಿನ ಸಿಪ್ಪೆಯನ್ನು ಹೆಚ್ಚಾಗಿ ತೆಗೆಯುವುದು, ಅವುಗಳನ್ನು ಹೆಚ್ಚಾಗಿ ಬೇಯಿಸುವುದು, ಮುಂತಾದವು ಈ ವಸ್ತುಗಳಲ್ಲಿರುವ ಅನ್ನಾಂಗಗಳನ್ನು ನಾಶಮಾಡುತ್ತವೆ. ಈ ಬಗ್ಗೆ ಸೂಕ್ತ ತಿಳುವಳಿಕೆ ನೀಡಬೇಕು.

ಅನೇಕ ಬಗೆಯ ಆಹಾರವನ್ನು ಹೆಚ್ಚು ತಿಂದರೂ ಸೂಕ್ತ ರೂಪ ಮತ್ತು ಅಳತೆಯಲ್ಲಿ ಸಿಗದ ಕೊಬ್ಬು ಮತ್ತು ಅನ್ನಾಂಗಗಳು ಒಂದು ಔಂಸ ಮಾಂಸದಲ್ಲಿ ಅಥವಾ ಒಂದು ಕೋಳಿಮೊಟ್ಟೆಯಲ್ಲಿ ಸಿಗಬಹುದು. ಆದರೆ ಧರ್ಮ ಮತ್ತು ಮನೋಭಾವನೆಗಳು ಇದಕ್ಕೆ ಅಡ್ಡಿ ತರುತ್ತವೆ. ಇದೇ ರೀತಿ ಹೆಚ್ಚಿನ ಹಣ ಖರ್ಚು ಮಾಡಿ

ತರುವ ಅನ್ನಾಂಗಗಳ ಗುಳಿಗೆಗಳಲ್ಲಿರುವ ಸತ್ವವು ಕೇವಲ ಒಂದು ಪಪಾಯಿ ಹಣ್ಣಿನಿಂದ ಸಿಗಬಹುದು. ಅನೇಕ ಬಗೆಯ ಕಾಯಿಗಳು, ಸೊಪ್ಪುಗಳು, ಬೇರುಗಳು ಸುಲಭವಾಗಿ ನಮ್ಮಲ್ಲೇ ಸಿಕ್ಕರೂ ಅದನ್ನು ಬಿಟ್ಟು ಹಣ ತೆತ್ತು ಪೇಟೆಯಿಂದ ಬಾಗಿದ, ಕ್ರಿಮಿನಾಶಕಗಳನ್ನು ಸಿಂಪಡಿಸಿದ, ದುಭಾರಿಯ, ಅನೇಕ ಕಾಯಿಪಲ್ಯೆ ತಂದು ನಮ್ಮ ಘನತೆ ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ಹಣ ಸಾಕಷ್ಟಿಲ್ಲದಿದ್ದರೆ ಯೋಗ್ಯ ಆಹಾರವನ್ನು ತಿನ್ನಲಾಗುವದಿಲ್ಲ. ಇದರಿಂದಾಗಿ ಮಕ್ಕಳು ಈ ಕೊರತೆಗೆ ವಿಶೇಷವಾಗಿ ಗುರಿಯಾಗುತ್ತಾರೆ. ಆದ್ದರಿಂದ ಸ್ಥಳೀಯವಾಗಿ ಸಿಗುವ ವಸ್ತುಗಳನ್ನೇ ಬಳಸುವ ಮತ್ತು ಕೈತೋಟಗಳಲ್ಲಿ ಉತ್ತಮ ತರಕಾರಿ ಬೆಳೆಯುವ ವಿಧಾನವನ್ನು ತಿಳಿಸಿಕೊಡಬೇಕು.

ಸರಕಾರವೂ ಕೂಡ ಮಕ್ಕಳಿಗೆ ಅತ್ಯವಶ್ಯಕವಾಗಿ ಬೇಕಾಗುವ ಹಾಲು, ಬೆಣ್ಣೆ, ಹಣ್ಣು, ಔಷಧ ಮತ್ತು ಕೆಲವೊಂದು ಆಹಾರ ಪದಾರ್ಥಗಳನ್ನು ಕಡಿಮೆ ಬೆಲೆಗೆ ಎಲ್ಲರಿಗೂ ಸಿಗುವಂತೆ ಮಾಡಬೇಕು. ಸರಕಾರ ಕಡ್ಡಾಯವಾಗಿ ಮಾಡಲೇ ಬೇಕಾದ ಕೆಲಸವೆಂದರೆ ಆಹಾರ ಪದಾರ್ಥದಲ್ಲಿ, ವಿಶೇಷವಾಗಿ ಮಕ್ಕಳಿಗೆ ಬೇಕಾಗುವ ವಸ್ತುಗಳನ್ನು ಕಲಬೆರಕೆ ಮಾಡುವವರಿಗೆ ಉಗ್ರವಾಗಿ ಶಿಕ್ಷಿಸಬೇಕು ಮತ್ತು ಮಕ್ಕಳಿಗೆಂದು ನೀಡಿದ ಬ್ರೆಡ್, ಹಾಲಿನಪುಡಿ, ಹಣ್ಣು, ಮೊಟ್ಟೆ ಮುಂತಾದವು ಅವರಿಗೇ ತಲುಪುವ ವ್ಯವಸ್ಥೆ ಮಾಡಬೇಕು. ಹೀಗೆ ಮಾಡುವುದರಿಂದ ಮಕ್ಕಳು ಉತ್ತಮವಾದ ಸಾಕಷ್ಟು ಆಹಾರ ತಿಂದು ಪುಷ್ಟರಾಗಿ ಬೆಳೆಯುತ್ತಾರೆ. ಆದರೆ ಪ್ರೌಢರ ಅಜ್ಞಾನದಿಂದಾಗಿ ಮಕ್ಕಳು ತಮ್ಮ ಚಿಕ್ಕ ವಯಸ್ಸಿನಲ್ಲಿಯೇ ದೃಷ್ಟಿ, ಶ್ರವಣ ಶಕ್ತಿ ಮುಂತಾದವನ್ನು ಕಳೆದುಕೊಳ್ಳಬಹುದು. ಇದರಿಂದ

ಅವರು ತಮ್ಮ ಜೀವನವಿಡೀ ಇನ್ನೊಬ್ಬರನ್ನು ಅವಲಂಬಿಸಬೇಕಾಗಿರುತ್ತದೆ. ತಮ್ಮ ಮಕ್ಕಳು ಜೀವನ ಪರ್ಯಂತ ಮತ್ತೊಬ್ಬರ ಹಂಗಿನಲ್ಲಿ ಬೆಳೆಯುವುದನ್ನು ತಪ್ಪಿಸಲು ತಂದೆ - ತಾಯಿಗಳು ತಮ್ಮ ಮಕ್ಕಳ ಅನ್ನ ಆಹಾರದ ಬಗೆಗೆ ಹೆಚ್ಚಿನ ಗಮನ ನೀಡಬೇಕು.

ಮಾನಸಿಕ ಅವಶ್ಯಕತೆಗಳು :

ಚಿಕ್ಕವರಾದರೂ ಮಕ್ಕಳಿಗೂ ಅನೇಕ ಆಸೆ-ಆಕಾಂಕ್ಷೆಗಳಿರುತ್ತವೆಂಬುದು ಅನೇಕ ಪ್ರೌಢರಿಗೆ ತಿಳಿಯದು. ತಾವು ಚಿಕ್ಕಮಕ್ಕಳಿದ್ದಾಗ ಯಾವ ಯಾವ ವಸ್ತುಗಳಿಗೆ, ವಿಷಯಗಳಿಗೆ ಆಸೆಪಟ್ಟಿದ್ದರೆಂಬುದು ಅನೇಕರಿಗೆ ಮರೆತೇ ಹೋಗಿರುತ್ತದೆ. ಆದರೆ ಅವೆಲ್ಲವುಗಳನ್ನು ಈಡೇರಿಸಬೇಕೆಂದೇನೂ ಅಲ್ಲ. ಇನ್ನು ಕೆಲವರಿಗೆ ಅವು ಕೇವಲ ಬಾಲ್ಯದ, ಅನನುಭವಿಕ ಆಸೆಗಳಾಗಿ ಕಾಣುತ್ತವೆ. ಆದರೆ ಮಕ್ಕಳ ಆಸೆ-ಆಕ್ಷಾಂಕ್ಷೆಗಳು ನೆರವೇರದಿದ್ದರೆ ಅವರ ಮನಸ್ಸಿನ ಮೇಲೆ ಆಗುವ ಅನೇಕ ಪರಿಣಾಮಗಳನ್ನು ನಾವು ತಿಳಿಯುವುದು ಅವಶ್ಯಕ ಅನೇಕ ಮನೋವಿಜ್ಞಾನಿಗಳ ಅಭಿಪ್ರಾಯದಂತೆ ಬಾಲ್ಯದ ಆಸೆ-ಆಕಾಂಕ್ಷೆಗಳು ನೆರವೇರದಿದ್ದರೆ ಅವು ಮನಸ್ಸನ್ನು ಬೇರೆ ಯಾವುದೇ ಮಾರ್ಗದಲ್ಲಿ, ಇನ್ನಾವುದೋ ರೂಪದಲ್ಲಿ ಅದನ್ನು ಪಡೆಯಲು ಪ್ರಚೋದಿಸಬಹುದು. ಆಗ ಬಾಲಾಪರಾಧ ಎಸಗುವ ಸಂಭವ ಉಂಟು. ಹೀಗಾಗುವುದು ಕಂಡು ಬಂದಾಗ ಹಿರಿಯರು ಮಕ್ಕಳನ್ನು ದಂಡಿಸುವುದು, ತಿದ್ದುವುದು ನಡೆಯುತ್ತದೆ. ಆದರೆ ಈ ಅಡ್ಡದಾರಿಗಳ ಹಿನ್ನೆಲೆ ಬಹು ದೂರಕ್ಕೆ ಹೋಗುತ್ತದೆ. ಹಿಂದೆ ಯಾವಾಗಲೋ ಮಗು ಕೇಳಿದ್ದನ್ನು ತಂದೆ ತಾಯಿಗಳು ನೀಡದಿದ್ದಾಗ ಮತ್ತು ಅದನ್ನು ಕದ್ದಾದರೂ ಪಡೆಯಬಹುದೆಂಬ ಸತ್ಯಕ್ಕೆ ಶರಣಾ

ಗಿದ್ದರೆ, ಅದನ್ನು ಮುಂದೆ ಬಿಡಿಸಲು ತೊಂದರೆಯಾಗುತ್ತದೆ. ಆದ್ದರಿಂದ ಮಕ್ಕಳಲ್ಲಿ ಉಂಟಾಗುವ ಸಹಜ ಆಸೆಗಳನ್ನು ಪೂರೈಸಲು ಪ್ರಯತ್ನಿಸಬೇಕು. ಈ ಆಸೆಗಳು ದುಷ್ಟ ಆಶೆಗಳಾಗಿದ್ದರೆ ಅಥವಾ ತಂದೆ ತಾಯಿಗಳಿಂದ ಪೂರೈಸಲು ಸಾಧ್ಯವಾಗದಿದ್ದರೆ, ಇದನ್ನು ಮಕ್ಕಳಿಗೆ ಅವರದೇ ರೀತಿಯಲ್ಲಿ ತಿಳಿ-ಹೇಳಬೇಕು. ಆದರೆ ತಮ್ಮದೇ ಆದ ಸಮಸ್ಯೆಗಳಿಂದ ಪೂರ್ವಗ್ರಹ ಪೀಡಿತರಾದ ಹಿರಿಯರು ಮಕ್ಕಳ ಈ ಯಾವ ವಿಷಯಗಳತ್ತ ಗಮನವೀಯು ವದು ಸಾಧ್ಯವಿಲ್ಲವಾದುದರಿಂದ ಅನೇಕ ತೊಂದರೆಗಳು ಹುಟ್ಟು ತ್ತವೆ.

ಮಕ್ಕಳು ದಿನ ನಿತ್ಯದಲ್ಲಿ ಆಸೆಪಡುವ ಕೆಲವೊಂದು ವಿಷಯ ಗಳು ಹೀಗಿರುತ್ತವೆ. ತಮಗೆ ಬಟ್ಟೆ, ಚೀಲ, ಚಪ್ಪಲಿ ಮುಂತಾದ ವನ್ನು ಕೊಳ್ಳುವಾಗ ಅವರು ತಮಗೆ ಬೇಕಾದ ಬಣ್ಣ ಅಥವಾ. ನಮೂನೆಯದನ್ನು ಆರಿಸುತ್ತಾರೆ. ಆದರೆ ಹಿರಿಯರ ದೃಷ್ಟಿಯಿಂದ ಅವು ಬಹಳ ಸಾಧಾರಣ ಅಥವಾ ಹಳೆಯದಾಗಿ ಕಾಣಬಹುದು. ಅದಕ್ಕೆ ಅವರು ಒಪ್ಪಿಗೆ ನೀಡಲಿಕ್ಕಿಲ್ಲ. ಇಲ್ಲಿ ಮಗು ತನ್ನ ಶಾಲೆಯಲ್ಲಿ ಅಥವಾ ನೆರೆಹೊರೆಯಲ್ಲಿ ಯಾರಾದರೂ ಸ್ನೇಹಿತರು ಹಾಕಿಕೊಂಡ ದ್ದನ್ನು ನೋಡಿ ತಾನೂ ಅದರಂತದ್ದೇ ತೆಗೆದುಕೊಳ್ಳಬೇಕೆಂದು ಆಸೆಪಟ್ಟರೆ ಅದು ಸಿಗುವುದಿಲ್ಲ. ಹೀಗೆ ಮಕ್ಕಳ ಮೇಲೆ ತಮ್ಮ ಅಭಿ ಪ್ರಾಯಗಳನ್ನು, ಅದು ಮಕ್ಕಳಿಗೆ ಸಂಬಂಧಿಸಿದಾಗಲೂ, ಹೇರು ತ್ತಾರೆ. ಇದರಿಂದಾಗಿ ಮಕ್ಕಳು ಈ ವಸ್ತುಗಳ ಬಗೆಗೆ ಅನಾದರ ತೋರಬಹುದು ಅಥವಾ ಅದಷ್ಟು ಜಾಗ್ರತೆ ಹರಿದು-ಮುರಿದು ಹಾಕಬಹುದು. ಅನೇಕ ಸಂದರ್ಭದಲ್ಲಿ ಮಗು ತನ್ನ ಹಿರಿಯರು ಹೇಳಿದ್ದನ್ನು ಒಪ್ಪದಿದ್ದರೆ ಇದು ಅವಿಧೇಯತೆ ಎಂದು ಗಮನಿಸ

ಲಾಗುತ್ತದೆ. ಅದಕ್ಕಾಗಿ ಮಕ್ಕಳು ದಂಡನೆಗೂ ಒಳಗಾಗುತ್ತಾರೆ. ಹೀಗೆ ಘನತೆ, ಗೌರವ, ಗುಣಮಟ್ಟ ಯಾವುದನ್ನು ಅರಿಯದ ಮುಗ್ಧ ಮಕ್ಕಳು ಆಸೆ ಪಟ್ಟ ವಸ್ತುಗಳು ದೊರಕದಿದ್ದಲ್ಲಿ ನಿರಾಶ ರಾಗುತ್ತಾರೆ. ಇದು ಅವರ ಮನಸ್ಸಿನ ಮೇಲೆ ದುಷ್ಪರಿಣಾಮ ಬೀರುತ್ತದೆಂಬುದು ಅನೇಕ ಪ್ರೌಢರಿಗೆ ತಿಳಿಯದು.

ಮನೋರಂಜನೆ :

ಯಾವುದೇ ಸಂಸ್ಕೃತಿಯಲ್ಲಿ ಮನರಂಜನೆಯು ಜನರ ವಯಸ್ಸು, ಲಿಂಗ, ಅಂತಸ್ತು, ಸಂಪ್ರದಾಯ ಮುಂತಾದವುಗಳಿಗೆ ಅನುಗುಣವಾಗಿರುತ್ತದೆ. ವಯಸ್ಕರು ತಮ್ಮ ಅಭಿಲಾಷೆಗೆ ತಕ್ಕಂತೆ ಮನರಂಜನ ಕಾರ್ಯಕ್ರಮವನ್ನು ಹಾಗೂ ಸಂಸ್ಥೆಗಳನ್ನು ರೂಢಿಸಿ ಕೊಳ್ಳಬಹುದು. ಆಟ, ಸಿನಿಮಾ, ಸಾಹಿತ್ಯ, ಪ್ರವಾಸ ಮುಂತಾದ ವುಗಳು ಮನರಂಜನೆಯನ್ನು ತರುತ್ತವೆ. ವೃದ್ಧರು ತಮ್ಮ ವಯಸ್ಸಿನಿಂದಾಗಿ ಅಥವಾ ಅನಾರೋಗ್ಯದಿಂದಾಗಿ ಒಂದೆಡೆ ಕುಳಿತು ನೋಡುವುದು ಅಥವಾ ಓದುವುದರಿಂದ ಮನರಂಜನೆ ಪಡೆಯುಬ ಹುದಲ್ಲದೆ ಪ್ರವಾಸ ಹೋಗಿ ಅಥವಾ ಆಟವಾಡಿಯಲ್ಲ. ಇದೇ ರೀತಿ ಮಕ್ಕಳೂ ಕೂಡ ತಮ್ಮ ಮನೋಭಾವನೆ ಹಾಗೂ ವಯಸ್ಸಿನ, ಶಕ್ತಿಯ ರೀತಿಯಂತೆ ತಮ್ಮದೇ ಆದ ಆಟಪಾಠಗಳಿಂದ ಮನರಂಜನೆ ಪಡೆಯುಬಲ್ಲರಲ್ಲದೆ ವಯಸ್ಕರು ತಮಗಾಗಿ ರೂಪಿಸಿಕೊಂಡಿರುವ ಕಾರ್ಯಕ್ರಮಗಳಿಂದಲ್ಲ. ಆದರೆ ಇಂದು ಎಷ್ಟು ಜನ ತಂದೆ ತಾಯಿಗಳು ಇದನ್ನು ತಿಳಿದಿದ್ದಾರೆ. ಮನರಂಜನೆ ಹಾಗೂ ಆಟಗಳ ಲ್ಲಿಯೂ ಹಿರಿಯರು ಕಿರಿಯರು ಮೇಲೆ ತಮ್ಮ ಅಭಿಪ್ರಾಯವನ್ನು ಹೇರಿರುವುದು ಕಂಡು ಬರುತ್ತದೆ. ನಾವು ಯಾವುದಾದರೊಂದು

ಸಿನಿಮಾಕ್ಕೆ ಹೋದಾಗ ಅಲ್ಲಿಯ ಕತ್ತಲು ವಾತಾವರಣ, ಶೇಖೆ, ಮತ್ತು ಸಿನಿಮಾದಲ್ಲಿಯ ಕ್ರೂರತನ, ಲೈಂಗಿಕ ಸನ್ನಿವೇಶಗಳು ಮಕ್ಕಳ ಮೇಲೆ ಪರಿಣಾಮ ಬೀರಿ ಅವರು ಅಲ್ಲಿಂದ ಹೊರ ಹೋಗುವಂತೆ ಸೂಚಿಸುತ್ತವೆ.

ಇದನ್ನೇ "ಮನರಂಜನೆ" ಎಂದು ಬಯಸಿ ಬಂದಿರುವ ತಂದೆ – ತಾಯಿಗಳು ಇಂತಹ ಸನ್ನಿವೇಶಗಳನ್ನು ಬಿಟ್ಟು ಹೊರ ಹೊಗಲು ಮನಸ್ಸು ಮಾಡದೆ ಮಕ್ಕಳ ಮನ ಒಲಿಸಲು ಸಿಹಿತಿಂದಿ ಕೊಟ್ಟು ವಂಚಿಸಬಹುದು ಅಥವಾ ಹೊಡೆದು ದಂಡಿಸಬಹುದು. ಮಗು ತನಗೆ ನೀರಡಿಕೆಯಾಗಿದೆ ಅಥವಾ ತಾನು ಮಲ–ಮೂತ್ರ ಮಾಡುತ್ತೇನೆಂದು ಆಗಾಗ ಹೊರಗೆ ಹೋಗ ಬಯಸಬಹುದು. ಮಗುವಿನ ಈ ಮನೋಭಾವನೆಯನ್ನು ಎಷ್ಟು ಜನ ತಂದೆ- ತಾಯಿ ಗಳು ತಿಳಿದು ಅದನ್ನು ಕರೆತರದೆ, ಮನೆಯಲ್ಲೇ ಯಾರದಾದರೂ ಬಳಿ ಬಿಟ್ಟು ಬರುತ್ತಾರೆ, ಅಥವಾ ಮಕ್ಕಳ ಈ 'ಹಿಂಸೆ'ಗಳನ್ನು ತಡೆಯಲು ತಾವೇ ಸಿನಿಮಾ ಮುಂತಾದಕಡೆ ಹೋಗುವುದನ್ನು ನಿರ್ಬಂಧಿಸಿಕೊಳ್ಳುತ್ತಾರೆ ?

ಪ್ರೌಢರು ತಮ್ಮ ಮನೋರಂಜನೆಗಾಗಿ ಹರಟೆ ಹೊಡೆಯು ವುದು ಒಂದು ಅಭ್ಯಾಸ. ವಿಶೇಷವಾಗಿ ಮಹಿಳೆಯರು ತಮ್ಮ ಮನೆ ಗೆಲಸದ ವೇಳೆಯಲ್ಲಿ ಅಥವಾ ಈ ಕೆಲಸ ಮುಗಿದನಂತರ ಒಂದೆಡೆ ಕುಳಿತು ಅಂದಿನ 'ಬಿಸಿ' ಸುದ್ದಿಯ ಬಗ್ಗೆ ಹರಟೆಹೊಡೆಯ ಬಹುದು. ಅವರು ಈ ಹರಟೆಯಲ್ಲಿ ಎಷ್ಟು ತಲ್ಲಿನರಾಗಿರುತ್ತಾರೆಂ ದರೆ ತಮ್ಮೊಡನೆ ತಮ್ಮ ಮಕ್ಕಳೂ ಇದ್ದಾರೆ, ಪ್ರೌಢರ ಈ ಹರಟೆಯ ಪರಿಣಾಮ ಅವರ ಮನಸ್ಸಿನ ಮೇಲೆ ಹೇಗೆ ಪ್ರತಿ

ಬಿಂಬಿತವಾಗಬಹುದೆಂಬುದು ತಿಳಿಯುವದಿಲ್ಲ. ಹರಟೆಯ ವಿಷಯ ಗಳು ಈರ್ಷೆ, ದ್ವೇಷ, ಅಸೂಯೆ, ಚಾಡಿ, ರೋಷ ಮುಂತಾದವು ಗಳಿಂದ ಕೂಡಿದ್ದಾಗ ಮಕ್ಕಳ ಮನಸ್ಸಿನಲ್ಲಿ ಅಪರಿಮಿತ ಪರಿಣಾಮ ಬೀರಲು ಸಾಧ್ಯವಿದೆ. ಮುಗ್ಧ ಮಕ್ಕಳಿಗೆ ಯಾವುದನ್ನು ಕಲಿಯ ಬೇಕು, ಯಾವುದನ್ನು ಕಲಿಯಬಾರದೆಂಬುದು ತಿಳಿಯುವದಿಲ್ಲ ವಾದ್ದರಿಂದ ಇಲ್ಲಿ ಪೌಢರ ಹೊಣೆಗಾರಿಕೆ ಬಹಳ ಇದೆ.

ಇದೇ ರೀತಿ ಮನರಂಜನೆಗೆಂದು ನಾವು ದೂರ ಪ್ರವಾಸ ಹೋಗುತ್ತೇವೆ ಅಥವಾ ಕ್ರಿಕೆಟ್‌ನಂತಹ ಆಟ ನೋಡಲು ಹೋಗು ತ್ತೇವೆ. ಸೂಕ್ತ ವಯಸ್ಸಿನ ಪೌಢರಿಗೆ ದೂರ ಪ್ರಯಾಣದ ದಣಿವು ಮತ್ತು ಹೊರಗೆ ಹೋದಾಗ ಅಲ್ಲಿನ ಅನ್ನ, ನೀರು ಮತ್ತು ಹವಾ ಗುಣಕ್ಕೆ ಹೊಂದಿಕೊಳ್ಳುವ ಶಕ್ತಿ ಇರುತ್ತದೆ. ಇದಕ್ಕೆ ಮಿಗಿಲಾಗಿ ಅಲ್ಲಿ ಅವರು ನೋಡುವ ಸ್ಥಳಗಳು, ದೃಶ್ಯಗಳು ಅವರಿಗೆ ಪ್ರೀಯ ವಾಗಿರುವುದರಿಂದ ಮನಸ್ಸಿಗೆ ಆಹ್ಲಾದ ನೀಡುತ್ತವೆ. ಆದರೆ ಇದಾ ವುದು ತಿಳಿಯದ ಮಗುವಿಗೆ ಇದು ಹಿಂಸೆಯಾಗಬಹುದು. ಅಲ್ಲದೆ ಅನೇಕ ಪ್ರವಾಸಿ ಜಾಗಗಳು ಪೌಢರಿಗೆಂದಿರುತ್ತವೆ. ಇಲ್ಲಿ ಮಕ್ಕಳು ನೋಡುವುದು, ತಿಳಿಯುವುದು ಕಡಿಮೆ ಇದ್ದು ಈ ಪ್ರವಾಸ ಅವ ರಿಗೆ ಹಿಂಸೆ ತರುತ್ತದೆ. ಆದರೆ ಬುದ್ಧಿವಂತ ತಂದೆತಾಯಿಗಳು ಮಕ್ಕ ಳಿಗೂ ಸಂತೋಷ ತರುವ ಜಾಗಗಳಾದ ಪ್ರಾಣಿಗಳ ಅಭಯಾ ಶ್ರಮಗಳು, ಕಾಡು, ಸಮುದ್ರ, ಪ್ರಾಣಿ ಸಂಗ್ರಹಾಲಯ, ಮೋಜಿನ ಜಾತ್ರೆ ಮುಂತಾದವುಗಳಿಗೆ ಕರೆದುಕೊಂಡು ಹೋಗ ಬೇಕು. ಆದರೆ ಅನೇಕ ತಂದೆ – ತಾಯಿಗಳಿಗೆ ಮಕ್ಕಳ ಇಂತಹ ಮನರಂಜನೆ ಜಾಗಗಳಿಗೆ ಹೋಗುವುದು ತಮ್ಮ ಅಂತಸ್ತಿಗೆ ತಕ್ಕ ದಲ್ಲ, ಅವಮಾನಕರವಾದುದ್ದು ಎಂದು ತಿಳಿದು ತಮಗೆ ಬೇಕಾದವು

ಗಳನ್ನು ಆರಿಸುತ್ತಾರೆ. ಆದರೆ ಪ್ರವಾಸದಿಂದ ಬಂತಿರುಗಿದ ಮಕ್ಕಳಿಗಾಗಲಿ, ಇವುಗಳ ಕಿರಿಕಿರಿ ಅಥವಾ ಅನಾರೋಗ್ಯದಿಂದ ಪೀಡಿಸಲ್ಪಟ್ಟ ಹಿರಿಯರಿಗಾಗಲೀ ಸುಖ ಸಂತೋಷ ಸಿಕ್ಕಿರುವುದಿಲ್ಲ. ಆದ್ದರಿಂದ ಪ್ರವಾಸ ಅಥವಾ ಆಟಪಾಠಗಳನ್ನು ನೋಡಲು ಹೋಗುವವರು ಪ್ರವಾಸ ಯೋಜನೆಯನ್ನು ತಯಾರಿಸಿಕೊಳ್ಳ ಬೇಕು. ಮಕ್ಕಳಿಗೆ ಬರಬಹುದಾದ ತೊಂದರೆಗಳನ್ನು ತಿಳಿದು ಅವು ಗಳನ್ನು ತಡೆಯಲು ಕ್ರಮ ಕೈಗೊಳ್ಳಬೇಕು. ಆದರೆ ನಮ್ಮ ಅನೇಕ ಪ್ರೌಢರು ಇದಾವುದೂ ತಿಳಿಯದಷ್ಟು ಮೂಢರಿರುತ್ತಾರೆ. ನಾವು ಹೋಗುವುದು ದೂರ ಪ್ರಯಾಣ ಅಥವಾ ಸಿನಿಮಾ ಮೂರು ತಾಸಿನದು ಎಂದು ತಿಳಿದಿದ್ದರೂ, ಮಕ್ಕಳಿಗೆ ಸೂಕ್ತವಾದ ನೀರು ಮತ್ತು ತಿನಿಸುಗಳನ್ನು ತೆಗೆದುಕೊಂಡು ಹೋಗುವುದಿಲ್ಲ. ಬಸ್ಸಿ ನಲ್ಲಿನ ಜನಸಂದಣಿ ಅಥವಾ ಮತ್ತಾವುದಾದರೂ ಅನಾದರಣೆ ಯಿಂದ ಮಕ್ಕಳಿಗೆ ನೀರು ಬೇಕು ಎಂದು ಅತ್ತರೂ ಕೊಡದಾಗು ತ್ತಾರೆ. ಇಲ್ಲವೆ ಹತ್ತಿರದಲ್ಲೇ ಸಿಗುವ ಅಶುದ್ಧ ನೀರು ಅಥವಾ ಅಗ್ಗದ ಸೋಡಾದಂತಹ ಪಾನೀಯವನ್ನು ಕುಡಿಸುತ್ತಾರೆ. ಇದರಿಂದ ಮಕ್ಕಳ ಆರೋಗ್ಯದ ಮೇಲೆ ದುಷ್ಪರಿಣಾಮವಾಗುವದೆಂಬುದು ಅವರಿಗೆ ತಿಳಿಯದು. ಆದ್ದರಿಂದ ಪ್ರೌಢರ ಮನರಂಜನಾ ಕಾರ್ಯಕ್ರಮಗಳಿಂದ ಮಕ್ಕಳ ಮೇಲಾಗುವ ಕೆಟ್ಟ ಪರಿಣಾಮವನ್ನು ತಿಳಿದು, ಈ ಬಗ್ಗೆ ಅವರ ತಂದೆ – ತಾಯಿಗಳಿಗೆ ಸೂಕ್ತ ತರಬೇತಿ ನೀಡುವ ವ್ಯವಸ್ಥೆ ಮಾಡಬೇಕು.

ಮಕ್ಕಳ ಸಾಹಿತ್ಯ ಮತ್ತು ಪುಸ್ತಕ ಭಂಡಾರ :

ಇಂದು ಪತ್ರಿಕೆಯಲ್ಲಿ ಬರುವ ಚಿತ್ರಗಳು, ಬರವಣಿಗೆಗಳು ಮತ್ತಿತರ ಸಾಹಿತ್ಯವು ವ್ಯಕ್ತಿತ್ವದ ಮೇಲೆ ಮಾಡುವ ಪರಿಣಾಮ

ವನ್ನು ಶಾಸ್ತ್ರೀಯವಾಗಿ ಅಭ್ಯಾಸಮಾಡಿದರೆ ಈ ಪ್ರೌಢರ ವಿಷಯುಗಳು ಮಕ್ಕಳ ಮೇಲೆ ಮಾಡುವ ದುಷ್ಪರಿಣಾಮಗಳನ್ನು ತಿಳಿಯಬಹುದು. ಇನ್ನೂ ಪ್ರಪಂಚ ಜ್ಞಾನ ಅರಿಯದ ಮಕ್ಕಳು ಈ ಪ್ರೌಢರಿಗೆಂದು ಬರೆದ ಸಾಹಿತ್ಯವನ್ನು ಓದಿ ಅಥವಾ ನೋಡಿ ಅಡ್ಡದಾರಿಗೆ ಹೋಗಬಹುದು. ಅಲ್ಲದೆ ನಮ್ಮ ದೇಶದಲ್ಲಿ ಮಕ್ಕಳ ಸಾಹಿತ್ಯದ ಕೊರತೆಯೂ ಇದೆ. ಅನೇಕ ಕಡೆ ಮಕ್ಕಳ ಹೆಸರಿನಲ್ಲಿ ಬರುವ ಕಥೆಗಳು, ಚಿತ್ರಗಳು, ಸಿನಿಮಾಗಳೂ ಮಕ್ಕಳಿಗೆ ಸರಿಯಾದ ಮಾರ್ಗದರ್ಶನವೀಯುವುದಿಲ್ಲ. ಅನೇಕ ಚಿತ್ರಗಳು ಮಕ್ಕಳಲ್ಲಿ ಅನಾವಶ್ಯಕ ಕುತೂಹಲವನ್ನು ಕೆರಳಿಸುವವು. ಆದ್ದರಿಂದ ಮಕ್ಕಳಿಗೆಂದೇ ಸಾಹಿತ್ಯ ಸೃಷ್ಟಿಯಾಗಬೇಕು ; ಅದು ಮಕ್ಕಳಿಗೆ ಸುಲಭವಾಗಿ ಸಿಗುವಂತಾಗಬೇಕು. ಇಂದು ಇಂತಹ ಸಾಹಿತ್ಯದ ಪ್ರಕಟಣೆ ಪ್ರಚಾರಕ್ಕೆ ತಗಲುವ ವೆಚ್ಚ ಗಗನ ಮುಟ್ಟುವಂತಿದ್ದು, ಈ ಶಿಸು ಸಾಹಿತ್ಯ ಕೇವಲ ಪುಸ್ತಕಾಲಯ, ವಿದ್ಯಾಸಂಸ್ಥೆಗಳಿಗೆ ಮಾತ್ರ ಲಭ್ಯವಾಗುತ್ತವಲ್ಲದೆ ಜನಸಾಮಾನ್ಯರಿಗಲ್ಲ. ಆದ್ದರಿಂದ ಸಮಾಜ ಮತ್ತು ಸರಕಾರ ಈ ಕಡೆ ಹೆಚ್ಚು ಗಮನ ನೀಡಬೇಕು.

ಇಂದು ನಮ್ಮಲ್ಲಿನ ಪುಸ್ತಕ ಭಂಡಾರಗಳು ಕೇವಲ ಪ್ರೌಢರ ಅವಶ್ಯಕತೆಗಳನ್ನು ಮಾತ್ರ ಪೂರೈಸುತ್ತವೆ. ಆದರೆ ಮಕ್ಕಳಿಗೆ ಬೇಕಾದದ್ದು ಬಣ್ಣಬಣ್ಣದ ಚಿತ್ರಗಳ, ಸಣ್ಣಸಣ್ಣ ಕಥೆಯ ಪುಸ್ತಕಗಳು, ಪ್ರಾಣಿ, ಪಕ್ಷಿಗಳ ಚಿತ್ರಗಳಿರುವ ಪುಸ್ತಕವೆಂದರೆ ಇನ್ನೂ ಆಸೆ. ಅಲ್ಲದೆ ಮಕ್ಕಳ ಪುಸ್ತಕಾಲಯ ಕೇವಲ ಪುಸ್ತಕಗಳನ್ನು ಮಾತ್ರವಲ್ಲ ಅವರು ಬೇಕೆಂಬ ಎಲ್ಲಾ ವಸ್ತುಗಳನ್ನೂ ನೀಡಬೇಕು.ಉದಾಹರಣೆಗೆ, ಅದು ಆಟಕ್ಕೆ ಗೊಂಬೆಗಳನ್ನು, ಆಟದ ವಸ್ತುಗಳನ್ನು, ಸಾಕು ಪ್ರಾಣಿಗಳನ್ನು ಎರವಲಾಗಿ ನೀಡಬಹುದು. ಆದರೆ ಪುಸ್ತಕ ಭಂಡಾರ

ಸೌಲಭ್ಯದ ಅನೇಕ ಉಪಯೋಗಗಳನ್ನು ತಿಳಿಯದ ನಾವು ಮಕ್ಕಳಿಗೆ ಈ ವಸ್ತುಗಳನ್ನು ಒದಗಿಸುವಲ್ಲಿ ಕರ್ತವ್ಯಚ್ಯುತರಾಗಿದ್ದೇವೆ. ಆದ್ದರಿಂದ ಪುಸ್ತಕ ಭಂಡಾರದ ಆಡಳಿತ ವರ್ಗಕ್ಕೆ ಸೇರಿದವರು ತಮ್ಮ ಮನೋಭಾವನೆಯನ್ನು ಬದಲಾಯಿಸಿ ತಮ್ಮ ಸಂಗ್ರಹದಲ್ಲಿ ಕೊನೆಯಪಕ್ಷ ಕಾಲುಭಾಗದಷ್ಟಾದರೂ ಮಕ್ಕಳ ಪುಸ್ತಕಗಳಾಗಿರಬೇಕೆಂದು ತಿಳಿಯಬೇಕು. ಅಲ್ಲಿ ಪ್ರೌಢರಿಗೆ ಅನ್ವಯಿಸುವ ನಿಯಮ – ನಿರ್ಬಂಧಗಳು ಮಕ್ಕಳಿಗೆ ಅನ್ವಯಿಸುವಂತಿರಬಾರದು. ಅವರಿಗಾಗಿಯೇ ಮೀಸಲಾದ ಕೂಡ್ರುವ ವ್ಯವಸ್ಥೆ ಇರಬೇಕು. ಅಲ್ಲಿ ಅವರ ಎತ್ತರಕ್ಕೆ, ಅನುಕೂಲಕ್ಕೆ ತಕ್ಕಂತೆ ಆಸನಗಳನ್ನು ಹಾಕಿರಬೇಕು. ಆಗ ಮಾತ್ರ ಮಕ್ಕಳು ಪುಸ್ತಕ ಭಂಡಾರಗಳ ಸೌಲಭ್ಯ ಪಡೆಯುವಂತಾಗುತ್ತದೆ.

ಮಕ್ಕಳ ಆಟದ ಸಾಮಾನುಗಳು :

ಇಂದು ಮಕ್ಕಳ ಆಟಕ್ಕೆ ಅನೇಕ ಸಾಮಾನುಗಳಿವೆ. ಇವು ಚೆಂಡು, ಬಗುರಿ, ಗೋಲಿ, ಮುಂತಾದವು ಅಥವಾ ಆಧುನಿಕ ಆಟದ ವಸ್ತುಗಳಾದ ಕಾರು, ಬಸ್ಸು, ವಿಮಾನ ಮುಂತಾದವಿರಬಹುದು. ಇನ್ನೂ ಅನೇಕ ಆಧುನಿಕ ರೀತಿಯ ಆಟದ ಸಾಮಾನುಗಳಾದ ಬಾಯಿ ಮತ್ತು ಕಣ್ಣು ತೆರೆದು ಮುಚ್ಚಿದ ಗೊಂಬೆಗಳು, ಶಬ್ದ ಮಾಡುವ ಗೊಂಬೆಗಳೂ ಇವೆ ಮತ್ತು ಕೆಲವು ಆಟದ ಸಾಮಾನುಗಳಿಂದ ಮಕ್ಕಳು ವಿದ್ಯೆ, ಅಂದರೆ ಅಕ್ಷರ, ಸಂಖ್ಯೆ, ಹಾಡು ಮುಂತಾದವನ್ನು ಕಲಿಯಬಹುದು. ಆದರೆ ಈ ಆಟದ ಸಾಮಾನುಗಳ ಬೆಲೆ ಗಗನ ಮುಟ್ಟುವಂತಿದೆ. ಒಂದು ಕಡೆ ದುಬಾರಿಯ ವಿದೇಶದ ಸಂಸ್ಕೃತಿಗೆ ಸೇರಿದ ಆಟದ ಸಾಮಾನುಗಳಿದ್ದರೆ

ಇನ್ನೊಂದು ಕಡೆ ಅಗ್ಗದ, ಕಳಪೆ ಆಟದ ಸಾಮಾನುಗಳನ್ನು ನೋಡುತ್ತೇವೆ. ಇವೆರಡೂ ಸಮಾಜ ಸಂಸ್ಕೃತಿಗೆ ಸಂಬಂಧಿಸಿಲ್ಲದಂತೆ ಕಾಣುತ್ತವೆ. ಆದರೆ ಜನಪದ–ಗ್ರಾಮೀಣ ಸಮಾಜದಲ್ಲಿನ ಆಟದ ಸಾಮಾನುಗಳನ್ನು ನೋಡಿದರೆ ಅವು ಜನಜೀವನಕ್ಕೆ ನೇರವಾಗಿ ಸಂಬಂಧಿಸಿದವು ಮತ್ತು ಜನ ಸಾಮಾನ್ಯರಿಗೂ ಕೊಳ್ಳಲು ಸಾಧ್ಯವಿರುವಂತಿವೆ. ಅನೇಕ ಸಲ ಹಳ್ಳಿಯ ತರುಣರು ತಮಗೆ ಬೇಕಾದ ಗೋಲಿ, ಬಗುರಿ, ಪೀಪಿ ಮುಂತಾದವನ್ನು ತಾವೇ ತಯಾರಿಸಿಕೊಳ್ಳಬಲ್ಲರು ಅಥವಾ ಅವರ ಹಿರಿಯರಿಂದ, ಸ್ನೇಹಿತರಿಂದ ಪಡೆಯಬಲ್ಲರು. ಆದ್ದರಿಂದ ಅನೇಕ ಸಲ ಇವನ್ನು ಹಣವಿಲ್ಲದೆ ಪಡೆಯಬಹುದು. ಇಂದು ಜನಪದ ಆಟದ ಸಾಮಾನುಗಳು ಸಿಗದಂತಾಗಿವೆ. ಹಳ್ಳಿಯ ಮಕ್ಕಳೂ ಪಟ್ಟಣದ ಆಟದ ಸಾಮಾನುಗಳಿಗೆ ಮಾರುಹೋಗಿರುವುದರಿಂದ, ಆವುಗಳನ್ನು ತಾವು ಹಣಕೊಟ್ಟು ಕೊಳ್ಳುವುದು ಸಾಧ್ಯವಿಲ್ಲದಿದ್ದರೂ ಪಡೆಯಲು ಪ್ರಯತ್ನಿಸುತ್ತಾರೆ. ಈ ಗೊಂಬೆಗಳು, ಆಟದ ಸಾಮಾನುಗಳು ಇವರಿಗೆ ಸಿಗಲೆಂದು ತಯಾರಕರು ಇವನ್ನು ಆದಷ್ಟು ಸಾಮಾನ್ಯ ವಸ್ತುಗಳಿಂದ ತೀರಾ ಸಾಮಾನ್ಯ ಗುಣಮಟ್ಟದಲ್ಲಿ ಮಾಡುತ್ತಾರೆ. ಹೀಗೆ ತಗಡು, ಪ್ಲಾಸ್ಟಿಕ್, ಮುಂತಾದವುಗಳಿಂದ ಮಾಡಿದ ಸಾಮಾನುಗಳನ್ನು ಮಕ್ಕಳಿಗೆ ಕೊಂಡು ಕೊಡುವುದರಿಂದ ಅವುಗಳೊಡನೆ ಆಡಿ ಕೈ–ಮೈಯನ್ನು ಗಾಯ ಮಾಡಿಕೊಳ್ಳುತ್ತಾರೆ. ಇವು ಬೇಗನೇ ಮತ್ತು ಸುಲಭವಾಗಿ ಮುರಿಯುತ್ತವೆ. ಆದರೆ ಹಣಕೊಟ್ಟು ತಂದಿದರಿಂದ ಇವುಗಳನ್ನು ಎಸೆಯುವಂತಿಲ್ಲ ಮತ್ತು ಹೊಸ ಆಟದ ಸಾಮಾನುಗಳನ್ನು ತರುವಂತಿಲ್ಲವಾದ್ದರಿಂದ ಮಕ್ಕಳು ಇವುಗಳೊಡನೆ ಆಡುತ್ತಾರೆ.

ಇನ್ನು ಅನೇಕ ಮಕ್ಕಳು ಯಾವ ತರಹದ ಆಟದ ಸಾಮಾನುಗಳೂ ಇಲ್ಲದೆ ತಮಗೆ ಸಿಕ್ಕ ಮಣ್ಣು, ನೀರು, ಕಲ್ಲುಗಳನ್ನು, ಹಣ್ಣು-ಕಾಯಿಗಳನ್ನು ಉಪಯೋಗಿಸಿಕೊಂಡು ಆಟವಾಡುತ್ತಾರೆ. ಹೀಗೆ ಕೊಳೆಯಲ್ಲಿ ಆಡುವುದರಿಂದ ಕಣ್ಣು, ಬಾಯಿಯಲ್ಲಿ ಬಟ್ಟೆಯಲ್ಲಿ ಕೊಳೆ ಸೇರಿ ಅನೇಕ ರೋಗಗಳೂ ಬರುತ್ತವೆ. ಆದರೆ ಹಿರಿಯರು ಇವಾವುದರ ಕಡೆ ಗಮನ ನೀಡುವುದಿಲ್ಲ. ಮಕ್ಕಳ ಮನ ಹಿಡಿಯುವ ಆಟಗಳನ್ನು, ಆಟದ ಸಾಮಾನುಗಳನ್ನು ಒದಗಿಸಿ ಅವರನ್ನು ಸದಾ ಕಾರ್ಯಮಗ್ನರನ್ನಾಗಿಡುವುದರ ಜೊತೆಗೆ ವೈಯಕ್ತಿಕವಾಗಿ ಹಾಗೂ ಸಮಾಜಿಕವಾಗಿ ವೇಳೆಯ ಸದುಪಯೋಗವಾಗುವಂತೆ ನೋಡಿಕೊಳ್ಳಬೇಕು. ಆದರೆ ತಮ್ಮದೇ ಆದ ದಿನನಿತ್ಯದ ವ್ಯವಹಾರದಲ್ಲಿ ತೊಡಗಿರುವ ಹಿರಿಯರಿಗೆ ಇದಾವುದರ ಪರಿವೇ ಇದ್ದಂತೆ ಕಾಣುವುದಿಲ್ಲ.

ಸಾರ್ವಜನಿಕ ಆಡಳಿತ ಸಂಸ್ಥೆಗಳಾದ ಗ್ರಾಮ ಪಂಚಾಯಿತಿ, ನಗರ ಸಭೆ ಮುಂತಾದವು ಮಕ್ಕಳಿಗೆ ಸಾಕಷ್ಟು ಆಟದ ಬಯಲುಗಳನ್ನು ಒದಗಿಸಬೇಕು. ಅದೆಷ್ಟೋ ಸಂದರ್ಭಗಳಲ್ಲಿ ಈ ಬಯಲುಗಳು ಸಾರ್ವಜನಿಕ ಕಸ ಮತ್ತು ಹಳೆಯ ಕಾರು, ಸಾಮಾನುಗಳನ್ನು ಶೇಖರಿಸುವ ಸ್ಥಳವಾಗಿಬಿಟ್ಟಿವೆ. ಈ ಬಯಲು ಜಾಗಗಳನ್ನು ಮಕ್ಕಳಿಗೆಂದೇ ಬಿಡುವುದರ ಜೊತೆಗೆ ಅವುಗಳನ್ನು ಸ್ವಚ್ಛವಾಗಿಟ್ಟು ವಿವಿಧ ಆಟಗಳಿಗೆ ವ್ಯವಸ್ಥೆಮಾಡಬೇಕು. ಹೀಗೆ ಎಲ್ಲರೂ, ಎಲ್ಲಾ ಸಾರ್ವಜನಿಕ ಸಂಸ್ಥೆಗಳೂ ಮಕ್ಕಳ ಮನೋರಂಜನೆಗೆ ಬೇಕಾದ ಸ್ಥಳ ಮತ್ತು ವಸ್ತುಗಳನ್ನು ನೀಡುವುದರಿಂದ ಅವರನ್ನು ಸಂತೋಷವಾಗಿಡಬಹುದು.

ಸಾಮಾಜಿಕ ಭದ್ರತೆ :

ಮಕ್ಕಳು ಸಮಾಜದಲ್ಲಿ ಆರೋಗ್ಯವಂತರಾಗಿ ಬೆಳೆಯಲು ಅನೇಕ ಸಾಮಾಜಿಕ ಭದ್ರತೆಗಳು ಆವಶ್ಯಕ. ಇಂದು ಸಮಾಜದಲ್ಲಿನ ಅನೇಕ ದುಷ್ಟ ಶಕ್ತಿಗಳು ಪ್ರೌಢರಿಂದ ನಿರ್ಮಿತವಾದವುಗಳು. ಇಲ್ಲಿ ಪ್ರೌಢರು ಕಾರ್ಯಮಗ್ನರಾಗಿದ್ದರೆ ಕಿರಿಯರ ಸಹಾಯದಿಂದಲೇ ಎನ್ನಬೇಕು. ಕೌಟುಂಬಿಕ ಹಿನ್ನೆಲೆ, ತಂದೆ ತಾಯಿಗಳ ಮಾರ್ಗ ದರ್ಶನವಿಲ್ಲದ ಮಕ್ಕಳು ಸುಲಭವಾಗಿ ಅಡ್ಡ ದಾರಿಗೆ ಬೀಳು ತ್ತಾರೆ. ಇಲ್ಲಿ ಕಿರಿಯರನ್ನೇ ಇಂತಹ ಕೆಲಸಗಳಿಗೆ ಆರಿಸುವುದಕ್ಕೆ ಅವರನ್ನು ಪ್ರೌಢರು ಸುಲಭವಾಗಿ ಮೋಸಗೊಳಿಸಬಹುದಾಗಿರು ವುದೇ ಕಾರಣವಾಗಿದೆ. ಅಲ್ಲದೆ ಕಳ್ಳತನ ಮಾಡಲು, ಕಿಸೆಕತ್ತರಿಸಲು ಅಥವಾ ಕಳ್ಳತನಕ್ಕೆ ಸಂಬಂಧಿಸಿದ ವಿಷಯವನ್ನು ಸಂಗ್ರಹಿಸಲು ಮತ್ತು ಕದ್ದಮಾಲನ್ನು ಯಾವ ಅನುಮಾನವೂ ಇಲ್ಲದಂತೆ ಸಾಗಿಸಲು ಮಕ್ಕಳನ್ನು ಹೇರಳವಾಗಿ ಬಳಸಲಾಗಿದೆ. ಇದೇ ರೀತಿ ಕಳ್ಳ ಭಟ್ಟಿ, ಜೂಜು ಮತ್ತು ವ್ಯಭಿಚಾರದಂತಹ ಸಮಾಜಬಾಹಿರ ವೃತ್ತಿಗಳಲ್ಲಿ ಮಕ್ಕಳನ್ನು ಬಳಸಲಾಗಿದೆ. ಇಂದು ವ್ಯಭಿಚಾರಕ್ಕೆ ಹದಿ ವಯಸ್ಸಿನ ಮಕ್ಕಳನ್ನು ಬಳಸಿ ಹಣ ಸಂಪಾದಿಸುವುದು ಒಂದು ಸುಲಭ ಮಾರ್ಗ. ವೃದ್ಧ ವೇಶ್ಯೆಯು ತನ್ನ ಜೀವನಕ್ಕೆ ಆಧಾರವಾಗಿ ಯಾವುದಾದರೊಂದು ಅನಾಥ ಅಥವಾ ಸಂಬಂಧಿ ಮಗಳನ್ನು ತಂದು ಅಥವಾ ಬೇರೆಯವರ ಮಗುವನ್ನು ಕದ್ದು ತಂದು, ವ್ಯಭಿ ಚಾರಕ್ಕೆ ಇಳಿಸಿರುವುದನ್ನು ಕಾಣುತ್ತೇವೆ. ಸಮಾಜದಲ್ಲಿನ ವ್ಯಭಿ ಚಾರಿಗಳೂ ಕೂಡ ತಮ್ಮ ಕಾಮದಾಟಕ್ಕೆ ಕಿರಿಯ ವಯಸ್ಸಿನ ಹುಡುಗಿಯರನ್ನು ಬೇಡುವುದು ಕಂಡು ಬರುತ್ತದೆ. ಎಳೆಯ ವಯಸ್ಸಿನಲ್ಲಿ ವ್ಯಭಿಚಾರಕ್ಕೆ ಇಳಿಸಿದ, ತಮ್ಮ ಆರೋಗ್ಯ ಕಳೆದು

ಕೊಂಡ, ಯಾವುದಾದರೂ ಗುಪ್ತ ರೋಗಕ್ಕೆ ಬಲಿಯಾದ ಅನೇಕ ಮಕ್ಕಳ ಗೋಳನ್ನು ಕೇಳಿದ್ದೇವೆ. ಮಕ್ಕಳನ್ನು ಇಂತಹ ಪರಿಸ್ಥಿತಿಯಿಂದ ಕಾಪಾಡಲು ಸರಕಾರ ಅನೇಕ ಕಾನೂನುಗಳನ್ನು ತಂದು ಬಾಲಾಪರಾಧಿಗಳನ್ನು, ವ್ಯಭಿಚಾರಿಗಳನ್ನು ಸೂಕ್ತವಾಗಿ ಚಿಕಿತ್ಸೆ ಮಾಡಲು ರಿಮಾಂಡ್ ಹೋಂ, ನಿರಾಶ್ರಿತರ ಮನೆಗಳು ಮುಂತಾದವನ್ನು ತೆರೆದು ಅನೇಕ ಉಪಯುಕ್ತ ಕಾರ್ಯಮಾಡಿದೆ. ಆದರೆ ಪ್ರೌಢರ ಜಗತ್ತು ಈ ಯಾವೇ ಕಾನೂನುಗಳು ಸೂಕ್ತ ರೀತಿಯಲ್ಲಿ ಕೆಲಸ ಮಾಡದಂತೆ ಮಾಡಿದೆ. ಏಕೆಂದರೆ ತಮ್ಮ ಸ್ವಾರ್ಥಕ್ಕೆ, ಸ್ವೇಚ್ಛಾಚಾರಕ್ಕೆ ಮಕ್ಕಳನ್ನು ಬಿಟ್ಟರೆ ಬೇರೆ ಯಾರೂ ಸುಲಭವಾಗಿ ಸಿಗುವುದಿಲ್ಲವಾದ್ದರಿಂದ ತಮಗೆ ಬೇಕಾದಂತೆ ಅವರನ್ನು ಕಾನೂನುಗಳನ್ನು ಉಪಯೋಗಿಸಿಕೊಂಡಿದ್ದಾರೆ. ಇಂತಹ ಪರಿಸ್ಥಿತಿಯಿಂದ ಮಕ್ಕಳನ್ನು ಕಾಪಾಡಲು ಪ್ರೌಢರಿಗೆ ತರಬೇತಿ ನೀಡಬೇಕು ಮತ್ತು ಸಾಮಾಜಿಕ ಭದ್ರತೆಯ ಬಗೆಗೆ ಇರುವ ಕಾನೂನುಗಳನ್ನು ಪರಿಣಾಮಕಾರಿಯಾಗುವಂತೆ ಜಾರಿಗೆ ತರಬೇಕು.

ಇಂದು ಅನೇಕ ಕಿರಿಯ ವಯಸ್ಸಿನವರು ಮಾದಕ ವಸ್ತುಗಳಿಗೆ ಬಲಿಯಾಗಿದ್ದಾರೆ. ಇವು ಕುಡಿತ, ಹೊಗೆ ಸೇದುವುದು, ಎಲೆ ಜಗಿಯುವುದು ಮುಂತಾದಾಗಿವೆ. ಈ ಚಟಗಳು ಅವರ ಭಾವೀ ಜೀವನವನ್ನು ಹಾಳು ಮಾಡುತ್ತವೆ. ಈ ಮಾದಕ ವಸ್ತುಗಳಿಗೆ ಗುರಿಯಾದ ಮಕ್ಕಳು ಉಳಿದ ಮಕ್ಕಳಂತಿರದೆ ಸದಾ ಅಮಲಿನ ಗುಂಗಿನಲ್ಲಿರುತ್ತಾರೆ. ತಮ್ಮ ದಿನನಿತ್ಯ ಕೆಲಸಗಳಿಗೆ ಗಮನ ಕೊಡದಾಗದೆ ತೊಂದರೆಗೀಡಾಗುತ್ತಾರೆ. ಇದರಿಂದ ಮತ್ತೆ ಮಾನಸಿಕ ತೊಂದರೆಗಳು ಹುಟ್ಟಿಕೊಳ್ಳುತ್ತವೆ. ಒಮ್ಮೆ ಈ ಚಟಕ್ಕೆ ಅಂಟಿಕೊಂಡರೆ ಅದರಿಂದ ಬಿಡುಗಡೆ ಹೊಂದುವುದು ಸಾಧ್ಯವಾದರೂ ಕಷ್ಟಕರ ವಿಷಯ.

ನಮ್ಮ ಸಮಾಜದಲ್ಲಿ ದುಶ್ಚಟಗಳಿಗೆ ಗುರಿಯಾದವರಿಗೆ ಗೌರವ ವಿಲ್ಲ ಮತ್ತು ಇದೊಂದು ಮಾನಸಿಕ ರೋಗವೆಂಬ ತಿಳವಳಿಕೆಯೂ ಇಲ್ಲ. ಎಲ್ಲರೂ ಅವರನ್ನು ಗೇಲಿಮಾಡುವುದು, ಅಯೋಗ್ಯರೆಂದು ತಿಳಿಯುವುದು, ಯಾವ ಜವಾಬ್ದಾರಿ ಕೆಲಸಕ್ಕೂ ಹಚ್ಚದಿರುವುದು ಕಂಡುಬರುತ್ತದೆ. ಸಮಾಜ, ಕುಟುಂಬ, ಸ್ನೇಹಿತರು ಹೀಗೆ ಎಲ್ಲರೂ ಅವರನ್ನು 'ಅಯೋಗ್ಯ' ಜನರೆಂದು ತಿಳಿಯುವುದರಿಂದ ಇಂತಹ ಮಕ್ಕಳು ತೀವ್ರ ಮಾನಸಿಕ ತೊಂದರೆಗೀಡಾಗಿ ಮಾದಕ ವಸ್ತುಗಳಿಗೆ ಹೆಚ್ಚು ಹೆಚ್ಚಾಗಿ ಮೊರೆ ಹೋಗುತ್ತಾರೆ. ಆದರೆ ಈ ಸಮಸ್ಯೆಗಳಿಗೂ ಪ್ರೌಢರೇ ಕಾರಣರಿರುತ್ತಾರೆ. ಮಕ್ಕಳಿಗೆ ಇನ್ನೂ ತಿಳುವಳಿಕೆ ಬರುವುದಕ್ಕೆ ಮುನ್ನವೇ ಅವರಿಗೆ ಈ ಚಟಗಳನ್ನು ಕಲಿಯಲು ಆಸ್ಪದ ಕೊಟ್ಟವರು ಪ್ರೌಢರೇ. ತಮಗೆ ಈ ವಸ್ತುಗಳು ಬೇಕಾದಾಗ ಮಕ್ಕಳ ಮೂಲಕ ತರಿಸಿ ಕೊಳ್ಳುತ್ತಾರೆ ಅಥವಾ ಇಂತಹ ವಸ್ತುಗಳನ್ನು ಮಕ್ಕಳ ಮುಂದೆ ಒಂದು ಘನತೆಯ ವಸ್ತುವಾಗಿ, ಅವಶ್ಯಕತೆಯಂತೆ ಸೇವಿಸುವುದರಿಂದ ಮಕ್ಕಳಿಗೂ ಇದನ್ನೇ ಸೇವಿಸಬೇಕೆಂಬ ಕುತೂಹಲ ಹುಟ್ಟುತ್ತದೆ. ಅದೂ ಅಲ್ಲದೆ ಈ ವಸ್ತುಗಳನ್ನು ಪ್ರೌಢರು ಮಕ್ಕಳಿಗೆ ಸಿಗದಂತೆ ದೂರವಿಡಬಹುದಿತ್ತು. ಆದರೆ ಮನೆಗಳಲ್ಲಿ, ಪೇಟೆಯಲ್ಲಿ ಅವು ಸುಲಭವಾಗಿ ಸಿಗುತ್ತವೆ. ಬೇಜವಾಬ್ದಾರಿ ಹಿರಿಯರು ಮತ್ತು ಲಾಭಕೋರ ವ್ಯಾಪಾರಿಗಳು ಮಕ್ಕಳಿಗೆ ಮಾದಕ ವಸ್ತುಗಳನ್ನು ಬಹು ಸುಲಭವಾಗಿ ದೊರಕುವಂತೆ ಮಾಡುತ್ತಾರೆ. ಅನೇಕ ಸಲ ಮಕ್ಕಳೂ ಶಾಲೆ ಅಥವಾ ನೆರೆ ಹೊರೆಯ ಸ್ನೇಹಿತರಿಂದ ಈ ಕೆಟ್ಟ ಅಭ್ಯಾಸವನ್ನು ಕಲಿತುಕೊಳ್ಳುತ್ತಾರೆ. ಇದಕ್ಕಾಗಿ ಶಾಲೆ ತಪ್ಪಿಸುವುದು, ಮನೆಯಿಂದ ಹಣ ಕದಿಯುವುದು ಮುಂತಾದವು ತೆರೆಯ ಮರೆಯಲ್ಲಿ ನಡೆದಿದ್ದರೂ ತಂದೆ-

ತಾಯಿಗಳು ತಮ್ಮದೇ ಆದ ಅನೇಕ ಸಮಸ್ಯೆಗಳಿಂದಾಗಿ ಈ ಕಡೆ ಗಮನ ನೀಡಿರುವುದಿಲ್ಲ. ಕೊನೆಗೆ ಅವರ ಗಮನಕ್ಕೆ ಬರುವಷ್ಟರಲ್ಲಿ ಅವರ ಮಗು ಈ ದಾರಿಯಲ್ಲಿ ಬಹುದೂರ ಹೋಗಿರುತ್ತಾನೆ. ಇಲ್ಲಿ ಕೂಡ ಪ್ರೌಢರು ಮತ್ತೆ ಅಡ್ಡಿಯಾಗಿದ್ದಾರೆ. ಮನೋವಿಜ್ಞಾನಿಗಳ ವಿವರಣೆಯಂತೆ ಈ ಯಾವುದಾದರೂ ಚಟಕ್ಕೆ ಒಳಗಾಗುವುದು ದುರ್ಬಲ ಮನಸ್ಸಿನಿಂದ. ಆದ್ದರಿಂದ ಇದು ಮನೋರೋಗದಲ್ಲಿ ಒಂದು. ಇದನ್ನು ಗುಣಪಡಿಸಲು ಅವನನ್ನು ಮನೋರೋಗ ವೈದ್ಯರಲ್ಲಿಗೆ ಕರೆತರಬೇಕು. ನಮ್ಮ ಸಮಾಜ ಮನೋರೋಗಿಗಳಿಗೆ ಸಾವಿಗಿಂತ ಉತ್ತಮ ಔಷಧಿ ಇಲ್ಲವೆನ್ನುವಂತೆ ಮಾಡಿದೆ. ಆದ್ದರಿಂದ ಮನೋವೈದ್ಯರಿಗೆ ತೋರಿಸುವುದು ಒಂದು ಅಗೌರವ ಕಾರ್ಯ ವೆಂದೂ, ಈ ವ್ಯಕ್ತಿ ಮನೋರೋಗಿ ಎಂದೂ ತಿಳಿಯದೆ ಸಮಾಜ, ಆತನ ತಂದೆ ತಾಯಿಗಳು, ಅಕ್ಕತಂಗಿಯರು ಮತ್ತು ಅಣ್ಣತಮ್ಮಂದಿ ರಿಗೂ ಗೌರವ ನೀಡುವುದಿಲ್ಲ ಮಾತ್ರವಲ್ಲ ಅವರ ಯಾವುದೇ ನಡವಳಿಕೆಯಲ್ಲಿ ಅಸಮಾನತೆಯನ್ನು ಹುಡುಕುತ್ತದೆ. ಮನೋ ರೋಗಿಯನ್ನು ಹುಚ್ಚನೆಂದೂ ತಿಳಿಯುತ್ತಾರೆ. ಜನ ಸಾಮಾನ್ಯರಲ್ಲಿ ಮನೋರೋಗಿಗಳು, ಅವುಗಳ ಬಗೆ, ವಿಧಾನ, ಮಟ್ಟ ಮುಂತಾ ದವುಗಳ ಬಗ್ಗೆ ಸೂಕ್ತ ಜ್ಞಾನವಿಲ್ಲದ್ದರಿಂದ, ಜನಾಭಿಪ್ರಾಯಕ್ಕೆ ಹೆದರಿ ತಂದೆ – ತಾಯಿಗಳು ತಮ್ಮ ಮಕ್ಕಳನ್ನು ಇಂತಹ ಚಿಕಿತ್ಸೆ ಯಿಂದ ದೂರವಿಡುತ್ತಾರೆ, ಮುಚ್ಚಿಡುತ್ತಾರೆ. ಕೇವಲ ಒಂದೆ ರಡು ಸಂದರ್ಶನಗಳಿಂದ ಗುಣವಾಗಬಹುದಾಗಿದ್ದ ತೊಂದರೆಯು ಮುಂದೆ ನಿಜವಾಗಿಯೂ ಗಂಭೀರ ಮನೋರೋಗಕ್ಕೆ ಕಾರಣವಾಗ ಬಹುದು. ಹೀಗೆ ಪ್ರೌಢರ ಗೊಳ್ಳು ಹೆಮ್ಮೆ, ಘನತೆ, ಗೌರವ, ಮುಂತಾದವುಗಳಿಂದ ಕಿರಿಯರು ತೊಂದರೆಗೀಡಾಗಿರುತ್ತಾರೆ.

ಸರಕಾರ ಮತ್ತು ಸಮಾಜ ಈ ಮಾದಕ ವಸ್ತುಗಳ ಬಗೆಗಿರುವ ಕಾನೂನುಗಳನ್ನು ಸೂಕ್ತವಾಗಿ ಪರಿಪಾಲಿಸುವಂತೆ ಮಾಡಬೇಕು. ಚಿಕ್ಕಮಕ್ಕಳಿಗೆ ಈ ವಸ್ತುಗಳು ಸಿಗದಂತೆ ಆಗಲು ಕಾನೂನು ಕಟ್ಟಳೆಗಳು ಬೇಕು. ತಪ್ಪಿತಸ್ಥರನ್ನು ಶಿಕ್ಷಿಸಬೇಕು. ಇದಕ್ಕೆ ಸಮಾಜವೂ ಸಹಕರಿಸಬೇಕು. ಎಲ್ಲಿ–ಬೇಕಾದಲ್ಲಿ ಸೆರೆ–ಸೇಂದಿ ಅಂಗಡಿಗಳು, ಕುಡಿದು ದಾರಿಯಲ್ಲಿ ತಿರುಗುವುದು, ಮಾದಕ ವಸ್ತುಗಳನ್ನು ಕುಟುಂಬದಲ್ಲಿ, ಅದರಲ್ಲೂ ಮಕ್ಕಳ ಎದುರಿಗೆ ಸೇವಿಸುವುದು, ಮಕ್ಕಳಿಂದ ತರಿಸಿಕೊಳ್ಳುವದು, ಮುಂತಾದವು ನಡೆಯದಂತೆ ನೋಡಿಕೊಳ್ಳಬೇಕು. ಪೋಲೀಸರು, ಕೋರ್ಟು ಮತ್ತು ಸಮಾಜಕಾರ್ಯಕರ್ತರು ಸಮರ್ಥ ರೀತಿಯಲ್ಲಿ ಈ ದಿಶೆಯಲ್ಲಿ ಕೆಲಸಮಾಡಬೇಕು.

ಆರ್ಥಿಕ ರಂಗದಲ್ಲಿ ಮಕ್ಕಳು :

ಇಂದು ಅತ್ಯಂತ ಹೆಚ್ಚಿನ ರೀತಿಯಲ್ಲಿ ಮಕ್ಕಳು ಅನಾದರಕ್ಕೀಡಾಗುತ್ತಿರುವುದು ಆರ್ಥಿಕ ರಂಗದಲ್ಲಿ. ಸ್ವಂತ ಲಾಭದ ಆಸೆಯಿಂದ ಅನೇಕ ವ್ಯಾಪಾರಸ್ಥರು, ವ್ಯವಸಾಯಗಾರರು, ಹೋಟೆಲ್ ಮತ್ತು ಗ್ಯಾರೇಜ್ ಮಾಲಿಕರು ತಮ್ಮ ಕೆಲಸಗಳಲ್ಲಿ ಮಕ್ಕಳನ್ನು ಹೆಚ್ಚಿನ ಸಂಖ್ಯೆಯಲ್ಲಿ, ಕಡಿಮೆ ಸಂಬಳ ನೀಡಿ ದುಡಿಸಿಕೊಳ್ಳುತ್ತಿದ್ದಾರೆ. ಅಲ್ಲದೆ ಚಿಕ್ಕ ಮಕ್ಕಳನ್ನು ಹೆದರಿಸಿ, ಬೆದರಿಸಿ, ಅವಧಿ ಮೀರಿ ಬೇಕಾದಂತೆ ದುಡಿಸಿಕೊಳ್ಳುತ್ತಾರೆ. ಇಂತಹ ಮಕ್ಕಳು ಸಾಮಾನ್ಯವಾಗಿ ಬಡ ಕುಟುಂಬದಿಂದ ಬಂದಿರುತ್ತಾರೆ. ತಂದೆ ಇಲ್ಲದೆ, ಇದ್ದರೂ ಅವನು ಯಾವುದಾದರೂ ರೋಗ ಅಥವಾ ಅಂಗವಿಕಲತೆಯಿಂದಾಗಿ ದುಡಿಯಲು ಅಸಮರ್ಥನಾಗಿದ್ದರೆ ಅಥವಾ ತನ್ನ ದುಶ್ಚಟಗಳಿಗಾಗಿ ಅವರನ್ನು ದುಡಿಯಲು ಕಳಿಸ

ಬಹುದು. ಇನ್ನೂ ಅನೇಕ ಕುಟುಂಬಗಳಲ್ಲಿ ತಂದೆ ತನ್ನ ಹೆಂಡತಿ ಮಕ್ಕಳನ್ನು ದೂರಮಾಡಿರಬಹುದು. ಆಗಲೂ ಮಕ್ಕಳು ದುಡಿಯಲು ಹೋಗಬೇಕಾಗುತ್ತದೆ. ಬಡತನದಿಂದ ಸರಿಯಾದ ಆಹಾರವಿಲ್ಲದೆ ಇರುವುದು ಮತ್ತು ಹೆಚ್ಚು ದುಡಿತ ಇದರಿಂದ ಮಕ್ಕಳು ತಮ್ಮ ಚಿಕ್ಕವಯಸ್ಸಿನಲ್ಲಿಯೇ ಆರೋಗ್ಯವನ್ನು ಕಳೆದುಕೊಳ್ಳುತ್ತಾರೆ. ಅಲ್ಲದೆ ತಮ್ಮ ಬಳಲಿಕೆ, ಮರುಳುತನದಿಂದಾಗಿ ಅನೇಕ ಅಪಘಾತಗಳಿಗೆ ಗುರಿಯಾಗುತ್ತಾರೆ. ಬೆಂಕಿ,ಪರಿತವಾದ ಮತ್ತು, ಅಪಾಯುಕರವಾದ ಸಲಕರಣೆಗಳು, ಯಂತ್ರಗಳನ್ನು ಬಳಸಿಮಾಡುವ ಕೆಲಸದಲ್ಲಿ ಸಂಭವಿಸುವ ಅನೇಕ ಅಪಘಾತದಲ್ಲಿ ಸತ್ತ ಅಥವಾ ಜೀವನವಿಡೀ ಅಂಗವಿಕಲರಾದಂತಹ ಮಕ್ಕಳ ಉದಾಹರಣೆಗಳೂ ಇವೆ.

ಹೀಗೆ ಚಿಕ್ಕಮಕ್ಕಳನ್ನು ದುಡಿಸಿಕೊಳ್ಳುವುದು ಅನೇಕ ಸಮಸ್ಯೆಗಳನ್ನು ತಂದಿದೆ. ಮೊದಲನೆಯದಾಗಿ ಚಿಕ್ಕ ವಯಸ್ಸಿನಲ್ಲಿ ಸುಖಶಾಂತಿಯಿಂದ ಬೆಳೆಯಬೇಕಾದ ಮಕ್ಕಳು ತಮ್ಮ ಜೀವನದ ಹಕ್ಕನ್ನು ಕಳೆದುಕೊಂಡು ಚಿಕ್ಕ ವಯಸ್ಸಿನಲ್ಲಿಯೇ ದುಡಿತದ ಭಾರ ಹೊರಬೇಕಾಗುತ್ತದೆ. ಇದರಿಂದಾಗಿ ಸಮಾಜದಲ್ಲಿ ಅನಕ್ಷರಸ್ಥರ ಸಂಖ್ಯೆ ಹೆಚ್ಚಾಗುತ್ತದೆ. ಇವರು ಪ್ರೌಢವಯಸ್ಸಿನಲ್ಲಿ ಕಾಲಿಟ್ಟಾಗ ದೇಶದ ಅನೇಕ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಶಕ್ತರಾಗುವುದಿಲ್ಲ. ಇದರಿಂದ ದೇಶಕ್ಕೆ ಹೊಣೆಗಾರ ಪ್ರಜೆಗಳ ಅಭಾವ ಒದಗುತ್ತದೆ. ಆದ್ದರಿಂದ ಬಾಲಕರು ದುಡಿಯುವುದನ್ನು ನಿಷೇಧ ಮಾಡುವುದು, ಅವರಿಗೆ ಚಿಕ್ಕ ವಯಸ್ಸಿನಲ್ಲಿ ಕುಟುಂಬದಲ್ಲಿ, ಶಾಲೆಯಲ್ಲಿ, ನೆರೆ-ಹೊರೆಯಲ್ಲಿ ಸಂತೋಷ ದೊರೆತು ಅವರು ಸುಸಂಸ್ಕೃತರು, ಆರೋಗ್ಯವಂತರೂ ಆಗಿ ಬೆಳೆಯಲು ಸಹಾಯವಾಗುತ್ತದೆ. ಎರಡನೆಯದಾಗಿ, ಚಿಕ್ಕಮಕ್ಕಳನ್ನು ದುಡಿಸಿಕೊಳ್ಳುವುದರಿಂದ

ಬಾಲಾಪರಾಧಿಗಳ, ಮನೆಯಿಂದ ಓಡಿಹೋಗುವವರ ಸಂಖ್ಯೆ ಹೆಚ್ಚಾಗುತ್ತದೆ. ಈ ವಯಸ್ಸಿನಲ್ಲಿ ಉಂಡುಟ್ಟು, ಯಾವ ಜವಾಬ್ದಾರಿಯೂ ಇಲ್ಲದೆ ಆಡಿಕೊಂಡಿರುವುದನ್ನು ಬಿಟ್ಟು ದುಡಿಯುವುದು ಅವರಿಗೆ ಬೇಸರ ತರುತ್ತದೆ. ಅಲ್ಲದೆ ತಮ್ಮ ಓರಗೆಯವರು ಶಾಲೆಗೆ ಹೋಗುವುದು, ಉತ್ತಮ ಬಟ್ಟೆ ಧರಿಸುವುದು, ಆಟವಾಡುವದು ಮುಂತಾದವು ಅವರ ಮನಸ್ಸನ್ನು ಸೆಳೆಯುತ್ತವೆ. ತಮಗೆ ಇಂತಹ ಒಂದು ಅವಕಾಶ ದೊರಕದಿದ್ದಕ್ಕೆ ಕೊರಗುತ್ತಾರೆ.

ಅಲ್ಲದೆ, ತಾವು ಕೆಲಸಮಾಡುವಾಗ ಮಾಡಿದ ತಪ್ಪುಗಳಿಗಾಗಿ ಮಾಲಿಕರಿಂದ ಬಡಿತ, ಉಪವಾಸ ಮುಂತಾದ ಅನೇಕ ಶಿಕ್ಷೆಗಳನ್ನು ಅನುಭವಿಸಬೇಕಾಗುತ್ತದೆ. ಸದಾ ಸಿಟ್ಟು-ಸಿಡುಕಿನಿಂದಿರುವ ಮಾಲಿಕರು ಇವರು ಮಾಡುವ ಯಾವ ಒಳ್ಳೆಯ ಕೆಲಸಕ್ಕೂ ಉತ್ತೇಜನ ಕೊಡದೆ ಸದಾ ಬಯ್ಯುವುದು, ಒದೆಯುವುದು ಮಾಡಬಹುದು. ಆಗ ಕೆಲಸ ತಪ್ಪಿಸಿ ಮನೆಗೆ ಬಂದರೆ ತಂದೆ ತಾಯಿಗಳು ಶಿಕ್ಷೆ ಕೊಡಬಹುದು, ಉಪವಾಸ ಹಾಕಬಹುದು. ಕೆಲಸಕ್ಕೆ ಬಂದರೆ ಇಲ್ಲಿ ಕೆಲಸ ಮಾಡಿದರೂ ಮಾಲಿಕರಿಂದ ಪ್ರತಿಫಲ, ಪ್ರಶಂಸೆ ಸಿಗುವುದಿಲ್ಲ. ಇಂತಹ ಸಂದರ್ಭದಲ್ಲಿ ಮಕ್ಕಳು ಮನೆ ಮತ್ತು ಕೆಲಸವನ್ನು ಬಿಟ್ಟು, ಸಿಕ್ಕ ಹಣ, ವಸ್ತುಗಳನ್ನು ದೋಚಿಕೊಂಡು ದೂರದ ದೊಡ್ಡ ನಗರಗಳಿಗೆ ಓಡಿ ಹೋದ ಉದಾಹರಣೆಗಳನೇಕ. ಇಂತಹ ನಗರಜೀವನಕ್ಕೆ ಹೊಸಬರಾದ ಇವರು ತಮಗೆ ತಿಳಿಯುವ ಮುನ್ನವೇ ಅಲ್ಲಿಯ ಕೇಡಿಗಳು, ಕಳ್ಳರು ಮುಂತಾದವರ ಮುಷ್ಠಿಯಲ್ಲಿ ಬೀಳುತ್ತಾರೆ. ತಮ್ಮಲ್ಲಿಯ ಅಲ್ಪ ಸಲ್ಪ ಹಣವನ್ನು ಅವರಿಗೆ ನೀಡಿ, ತಮ್ಮ ಊಟ, ತಿಂಡಿ, ವಸತಿ ಮತ್ತು ಅನೇಕ ಸಂದರ್ಭದಲ್ಲಿ ರಕ್ಷಣೆಗೆ, ಯಾರಾದರೊಬ್ಬ ದೊಡ್ಡ ಕೇಡಿಯನ್ನು ಆಶ್ರಯಿಸಬೇಕಾ

ಗುತ್ತದೆ. ಈ ಹಿರಿಯ ಕೇಡಿಯು ಅವರಿಗೆ ತನ್ನ "ಕಸಬಿ"ನಲ್ಲಿ ಸೂಕ್ತ ತರಬೇತಿ ನೀಡಿ ತನ್ನ ಸಹಾಯಕನನ್ನಾಗಿ ಉಪಯೋಗಿಸಿಕೊಳ್ಳು ತ್ತಾನೆ. ಹೀಗೆ ಸಣ್ಣದರಿಂದ ಪ್ರಾರಂಭವಾಗಿ ಮುಂದೆ ದೊಡ್ಡ ಕಳ್ಳರಾಗಿ, ಸದಾ ಪೊಲೀಸ್, ನ್ಯಾಯಾಲಯ,ಜೇಲು ಮುಂತಾದವು ಗಳಿಗೆ ಸೂಕಲ್ಪಡುತ್ತಾರೆ. ಹೀಗೆ ಸದಾ ನ್ಯಾಯಬಾಹಿರವಾದ ಜೀವನ ನಡೆಸುವುದರಿಂದ ಸಮಾಜಕ್ಕೆ ಕಂಟಕರಾಗುತ್ತಾರೆ ಹಾಗೂ ತಮಗೆ ತಾವೇ ಕಷ್ಟ ತಂದುಕೊಳ್ಳುತ್ತಾರೆ.

ಕೊನೆಯದಾಗಿ, ಇಂದು ನೂರಾರು ಮಕ್ಕಳು ಚಿಕ್ಕವಯಸ್ಸಿ ನಲ್ಲೇ ಆತ್ಮಹತ್ಯ ಮಾಡಿಕೊಳ್ಳುವುದನ್ನು ಕಾಣುತ್ತೇವೆ. ಜೀವನ ದಲ್ಲಿ, ಹೆಚ್ಚಿನ ಸಾಮಾಜಿಕ, ಆರ್ಥಿಕ ಅಥವಾ ಮಾನಸಿಕ ತೊಂದರೆ ಗಳಿಂದ ಜಿಗುಪ್ಸೆಗೊಂಡ ಪ್ರೌಢರು ಮಾತ್ರ ಆತ್ಮಹತ್ಯ ಮಾಡಿಕೊಳ್ಳುವುದು ಸಾಮಾನ್ಯವಾಗಿ ಕಂಡು ಬರುತ್ತದೆ. ಆದರೆ ಇನ್ನು ಜೀವನವನ್ನೇ ಪ್ರವೇಶಮಾಡಿರದ ಈ ಮಕ್ಕಳಿಗೆ ಜೀವನ ದಲ್ಲಿ ಜಿಗುಪ್ಸೆತರುವ ಸಮಸ್ಯೆಗಳೆಲ್ಲಿಂದ ಬರಬೇಕು? ಅಂದರೆ ಈ ಮಕ್ಕಳು ತಪ್ಪು ತಿಳುವಳಿಕೆಯಿಂದ ಆತ್ಮಹತ್ಯ ಮಾಡಿಕೊಳ್ಳುತ್ತಿ ದ್ದಾರೆ. ಜೀವನದಲ್ಲಿ ಅರಳುವುದಕ್ಕೆ ಮುನ್ನವೇ ಸಾವನ್ನಪ್ಪುವ ಈ ಮಕ್ಕಳ ಸಾವಿಗೆ ಪ್ರೌಢರೇ ಕಾರಣರು. ಅನೇಕ ಸಲ ತಮ್ಮ ಘನತೆ, ಗೌರವ, ಅಂತಸ್ತು, ಛಲ, ಮುಂತಾದವಕ್ಕೆ ಕಟ್ಟು ಬಿದ್ದು ಹಿರಿಯರು ತಮಗರಿಯದಂತೆ ಕಿರಿಯರನ್ನು ಆತ್ಮಹತ್ಯ ಮಾಡಿ ಕೊಳ್ಳುವಂತೆ ಮಾಡುತ್ತಾರೆ. ತಿಳಿಯದೆ ತಪ್ಪು ಮಾಡುವ ಮಕ್ಕಳನ್ನು ಅರ್ಥಮಾಡಿಕೊಂಡು, ಅವರಿಗೆ ಸೂಕ್ತವಿವರಣೆ, ತಿಳುವಳಿಕೆ ನೀಡಿದ್ದರೆ ಇಂತಹ ಅನರ್ಥಗಳನ್ನು ತಪ್ಪಿಸಬಹುದು.

ಮಕ್ಕಳು ಆತ್ಮಹತ್ಯ ಮಾಡಿಕೊಳ್ಳುವ ಕಾರಣಗಳು ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿರುವದು, ಹಣ ಕಳೆದಿರುವುದು, ಸುಳ್ಳು ಹೇಳುವುದು, ಶಾಲೆಗೆ ತಪ್ಪಿಸುವುದು, ಮುಂತಾದ ತೀರಾ ಸಾಮಾನ್ಯ ವಿಷಯಗಳಾಗಿರುತ್ತವೆ. ತಮಗೆ ಬೇಕಾದ ವಸ್ತುಗಳನ್ನು ಅವರ ತಂದೆ ತಾಯಿಗಳು ಕೊಡಿಸಿಕೊಡದಾಗಲೂ ಅವರು ತಮ್ಮ ಸ್ನೇಹಿತರ ಗುಂಪಿನಲ್ಲಿ ಅವಮಾನಿತರಾಗಿ ಆತ್ಮಹತ್ಯಮಾಡಿಕೊಳ್ಳುವ ಪ್ರಸಂಗಗಳೂ ಉಂಟು. ಅವರು ಬಯಸಿದ ವಸ್ತುಗಳು ಅನಾವಶ್ಯಕವೆಂದು ತಿಳಿದಾಗ ಮಕ್ಕಳಿಗೆ ಇದನ್ನು ಸರಿಯಾಗಿ ತಿಳಿಸಿ ಹೇಳಬೇಕು. ಅನೇಕ ಸಾರಿ ತಮ್ಮ ಹೆಡ್ಡತನದಿಂದ, ತಮ್ಮ ಆರ್ಥಿಕ ಅಸಹಾಯಕತೆಯಿಂದ, ಮಕ್ಕಳನ್ನು ಜರಿಯುತ್ತಾರೆ, ಗೇಲಿ ಮಾಡುತ್ತಾರೆ. ಇದರಿಂದಾಗಿ ಮಕ್ಕಳಲ್ಲಿ ತಾವು ಮಾಡುತ್ತಿರುವುದು ತಪ್ಪು ಎಂಬ ಭಾವನೆ ಬಂದು, ಅಪರಾಧ ಅಥವಾ ಪಾಪದ ಕೆಲಸವೆಂಬ ಭಾವನೆ ಬಂದು, ಅದನ್ನು ತೊಡೆದು ಹಾಕಲು ಆತ್ಮಹತ್ಯವೇ ಮಾರ್ಗವೆಂದು ತಿಳಿಯುತ್ತಾರೆ.

ಹುಡುಗಿಯರು ಅನೈತಿಕ ಲೈಂಗಿಕ ಸಂಬಂಧ ಹೊಂದಿದ್ದರೆ, ಅಥವಾ ನಕಲಿ ಪ್ರೇಮದ ಬಲೆಯಲ್ಲಿ ಸಿಕ್ಕು ವಂಚಿತರಾಗಿ ಗರ್ಭಿಣಿಯರಾದರೆ ಕೇವಲ ಅವರು ಮಾತ್ರ ಕಾರಣರಲ್ಲ. ಅನೇಕ ಸಾರಿ ಲೈಂಗಿಕ ಕುತೂಹಲವನ್ನು ಅವರಲ್ಲಿ ಕೆರಳಿಸಿದವರು ಹಿರಿಯರೇ ಇರುತ್ತಾರೆ. ಇಂದಿನ ನಮ್ಮ ಸಾಹಿತ್ಯ, ಸಿನಿಮಾ ಮುಂತಾದವು ಅವರಲ್ಲಿ ಲೈಂಗಿಕ ಆಸಕ್ತಿಗಿಂತ ಕುತೂಹಲವನ್ನು ಕೆರಳಿಸುವುದಾಗಿರುತ್ತವೆ. ಆದ್ದರಿಂದ ಕಿರಿಯರು ಸುಲಭವಾಗಿ ಮೋಸ ಹೋಗುತ್ತಾರೆ. ಆದರೆ ಪ್ರೌಢರು ಇದನ್ನು ತಮ್ಮ ಘನತೆ-ಗೌರವದ ವಿಷಯವನ್ನಾಗಿ ಮಾಡಿಕೊಳ್ಳದೆ ಮಕ್ಕಳ ಸಮಸ್ಯೆಯನ್ನು

ನಿವಾರಿಸಬೇಕು. ಇದನ್ನು ಮರೆತು ಮಕ್ಕಳು ಯಾವುದೋ ಅಪರಾಧ, ಪಾಪಮಾಡಿದವರಂತೆ ಅವರನ್ನು ನಡೆಸಿಕೊಂಡರೆ, ತಂದೆ-ತಾಯಿಗಳಿಗೆ, ಕುಟುಂಬಕ್ಕೆ, ಸಮಾಜಕ್ಕೆ ಯಾವುದೋ ಆಪತ್ತು ತಂದವರೆಂಬ ಭಾವನೆ ಹುಟ್ಟಿಸಿ, ಅವರಲ್ಲಿ ಪಾಪದ ಭಾವನೆ ತಂದು ಆತ್ಮಹತ್ಯ ಮಾಡಿಕೊಳ್ಳುವಂತೆ ಮಾಡುತ್ತಾರೆ. ಇಂತಹ ಸನ್ನಿವೇಶ ಬಂದಾಗ ಹಿರಿಯರು ಸೂಕ್ಷ್ಮವಾಗಿ ಈ ಸಮಸ್ಯೆಯನ್ನು ಪರಿಹರಿಸಬೇಕು ಮತ್ತು ಕಿರಿಯರು ಮಾಡಿದ ಇಂತಹ ತಪ್ಪುಗಳಲ್ಲಿ ತಮ್ಮ ಪಾಲೂ ಇದೆ. ತಾವು ತಪ್ಪಿತಸ್ಥರು ಎಂಬ ತಿಳುವಳಿಕೆ ಬರಬೇಕು. ಹೀಗೆ ತಪ್ಪನ್ನು ತಾವು ಒಪ್ಪುವುದರಿಂದ ಮಕ್ಕಳು ಧೈರ್ಯತಾಳಿ ಇಂತಹ ಸಮಸ್ಯೆಗಳನ್ನು ಎದುರಿಸಲು ಶಕ್ತರಾಗುತ್ತಾರೆ. ಆದರೆ ಸಂಪ್ರದಾಯಸ್ಥ ಸಮಾಜಗಳು ಪ್ರಾಣಕ್ಕಿಂತ ಮಾನಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡುವುದರಿಂದ ಮಾನ ಹೋದ ಮೇಲೆ ಬದುಕಿರಲೇಬಾರದೆಂದು ಸಾರಿ ಮಕ್ಕಳನ್ನು, ತರುಣರನ್ನು ಗೊಂದಲಕ್ಕೊಳಗಾಗುವಂತೆ ಮಾಡಿವೆ. ಇಲ್ಲಿ ಪ್ರೌಢರ ಪಾತ್ರ ಹಿರಿದು. ತಮ್ಮ ನಡವಳಿಕೆಯಲ್ಲಿ ಅವರು ಸೂಕ್ತ ತಿದ್ದುಪಡಿ ಮಾಡಿಕೊಳ್ಳಬೇಕಾಗುತ್ತದೆ.

ಹೀಗೆ ಮಕ್ಕಳು ಅನೇಕ ವಿಧದಲ್ಲಿ ಪ್ರೌಢರಿಂದ ತೊಂದರೆಗಳನ್ನು ಅನುಭವಿಸುತ್ತಾರೆ. ಇಲ್ಲಿ ಮಕ್ಕಳು ಕಿರಿಯರು, ಅನುಭವ ಸಾಲದವರು ಮತ್ತು ಹಿರಿಯರ ಮೇಲೆ ಅವಲಂಬಿಗಳು. ಆದ್ದರಿಂದ ಪ್ರೌಢರೇ ತಮ್ಮ ತಿಳುವಳಿಕೆ, ರೀತಿ, ನಂಬಿಕೆ, ಆಚಾರ, ವಿಚಾರಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಂಡು ಮಕ್ಕಳಿಗೆ ಬರುವ ಅನೇಕ ಸಮಸ್ಯೆಗಳನ್ನು ಮುಂದಾಗಿಯೇ ಗುರಿತಿಸಿ ತಿಳಿದು ಪರಿಹರಿಸಬಹುದು. ಆದರೆ ತಮ್ಮದೇ ಆದ ಆಸೆ, ಲಾಭ, ನಂಬಿಕೆ

ಯುಳ್ಳ ಪ್ರೌಢರು ತಮ್ಮ ಘನತೆ–ಗೌರವಕ್ಕೆ ಹೆಚ್ಚಿನ ಬೆಲೆಕೊಟ್ಟು ಮಕ್ಕಳಿಗೆ ಸಮಸ್ಯೆತಂದಿದ್ದಾರೆ. ಅದರಿಂದಾಗಿ ಮಕ್ಕಳು ಪ್ರೌಢರ ಜಗತ್ತಿನಲ್ಲಿ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗಿದೆ.

ಅಧ್ಯಾಯ ೩

ಉಪಸಂಹಾರ

ಮಕ್ಕಳೇ ನಮ್ಮ ಬದುಕು, ಬಾಳು; ಮಕ್ಕಳಿಲ್ಲದ ಬಾಳು ಬರಡು; ಮಕ್ಕಳೇ ನಮ್ಮ ಆಧಾರ; ಮಕ್ಕಳ ಅಭಿವೃದ್ಧಿಯೇ ರಾಷ್ಟ್ರದ ಅಭಿವೃದ್ಧಿ ಎಂದು ನಂಬಿ ಅವರ ಕಲ್ಯಾಣಕ್ಕೆ ವಿಶ್ವಸಂಸ್ಥೆಯ ಮಾರ್ಗದರ್ಶನದಲ್ಲಿ ವಿವಿಧ ರಾಷ್ಟ್ರಗಳು ತಮ್ಮದೇ ಆದ ಕಾರ್ಯಕ್ರಮ ರೂಪಿಸಿಕೊಂಡಿವೆ. ಆದರೂ ಇಂದು ಅನೇಕ ಸಾಮಾಜಿಕ ಹಾಗೂ ರಾಜಕೀಯ ಕಾರಣಗಳಿಂದ ಮುಂದುವರೆದ ಮತ್ತು ಮುಂದುವರೆಯುತ್ತಿರುವ ದೇಶಗಳಲ್ಲಿ ಮಕ್ಕಳು ತೊಂದರೆ ಗೀಡಾಗಿದ್ದಾರೆ. ಅನೇಕ ಮುಂದುವರೆಯುತ್ತಿರುವ ದೇಶಗಳಲ್ಲಿ ಈ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೆ ತರಲು ಸೂಕ್ತ ತಜ್ಞರ ಮತ್ತು ಹಣದ ಅಭಾವವೇ ಕಾರಣವಿರುತ್ತದೆ. ಇಂತಹ ಪರಿಸ್ಥಿತಿಯಿಂದ ಮಕ್ಕಳನ್ನು ಕಾಪಾಡಲು ವಿಶ್ವಸಂಸ್ಥೆ ತನ್ನ ಅನೇಕ ಕಾರ್ಯಾಂಗಗಳ ನೆರವಿನಿಂದ ಜಗತ್ತಿನಾದ್ಯಂತ ಮಕ್ಕಳ ನೆರವಿಗೆ ಬಂದಿದೆ. ಜಗತ್ತಿನ ರಾಷ್ಟ್ರಗಳು ಮಕ್ಕಳನ್ನು ಒಂದು ಮಹತ್ವದ ಆಸ್ತಿ ಎಂದು ಪರಿಗಣಿಸಲು ಮತ್ತು ಅವರನ್ನು ಸೂಕ್ತವಾಗಿ ಪಾಲಿಸಲು ಮತ್ತು ಬೆಳೆಸಲು ಕೆಲವೊಂದು ಮಕ್ಕಳ ಹಕ್ಕುಗಳನ್ನು ೧೯೫೨ ರಷ್ಟು ಹಿಂದಿಯೇ ತಂದುಕೊಟ್ಟಿದೆ. ಆದರೂ ಅನೇಕ

ರಾಷ್ಟ್ರಗಳ ಮಕ್ಕಳು ಅನೇಕ ಬಗೆಯ ಸಮಸ್ಯೆಗಳನ್ನು ಹೊಂದಿದ್ದಾರೆ. ಜೀವನಾವಶ್ಯಕವಾದ ಊಟ, ವಸತಿ, ಅನ್ನ, ನೀರು, ಅರಿವೆ, ಔಷಧ, ಶಿಕ್ಷಣ, ಮಾರ್ಗದರ್ಶನ, ಮುಂತಾದವುಗಳ ಅಭಾವ ಪ್ರಾಮುಖ್ಯವಾದವುಗಳು. ಇವುಗಳ ಕೊರತೆಯನ್ನು ನಿವಾರಿಸಲು ವಿಶ್ವಸಂಸ್ಥೆಯು ತನ್ನ ಸದಸ್ಯ ರಾಷ್ಟ್ರಗಳಿಗೆ ಸೂಕ್ತ ಸಲಹೆ ಮತ್ತು ನೆರವು ನೀಡಿದೆಯಾದರೂ, ಅನೇಕ ಕಾನೂನುಗಳು, ಶಾಸನಗಳು ಮತ್ತು ಕಾರ್ಯಕ್ರಮ ಇವೆಯಾದರೂ, ಅವು ಸಮರ್ಪಕ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ. ಈ ಬಗ್ಗೆ ಎಲ್ಲಾ ರಾಷ್ಟ್ರಗಳ ಗಮನವನ್ನು ಮಕ್ಕಳ ಸಮಸ್ಯೆಗಳತ್ತ ಸೆಳೆಯಲು ೧೯೭೯ ನೇ ವರ್ಷವನ್ನು ಅಂತರ್‌ರಾಷ್ಟ್ರೀಯ ಮಕ್ಕಳ ವರ್ಷವೆಂದು ಸಾರಲಾಯಿತು. ಇಲ್ಲಿ ಪ್ರೌಢರ ಜಗತ್ತಿನಲ್ಲಿ ಮಕ್ಕಳು ಅನುಭವಿಸುತ್ತಿರುವ ಸಮಸ್ಯೆಗಳ ಬಗ್ಗೆ ಸಮಾಜದ, ಸರಕಾರದ ಗಮನ ಸೆಳೆಯುವದು ಉದ್ದೇಶಿಸವಾಗಿತ್ತು.

ಮಕ್ಕಳು ಅನುಭವಿಸುತ್ತಿರುವ ಸಮಸ್ಯೆಗಳನ್ನು ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಮತ್ತು ಮಾನಸಿಕ ಸಮಸ್ಯೆಗಳೆಂದು ವಿಭಾಗಿಸಬಹುದು. ಈ ಎಲ್ಲಾ ರಂಗಗಳಲ್ಲೂ ಪ್ರೌಢರು ತಮ್ಮದೇ ಆದ ಮೌಲ್ಯಗಳನ್ನು ಪಡೆದಿದ್ದು ಅವುಗಳನ್ನು ಮಕ್ಕಳ ಮೇಲೆ ಹೇರಲು ಪ್ರಯತ್ನಿಸುತ್ತಿದ್ದಾರೆ. ಆಗ ಮಕ್ಕಳಿಗೆ ಅನೇಕ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಮಕ್ಕಳನ್ನು ಸಣ್ಣವರು, ಮೂಢರು, ಅಶಕ್ತರು ಮುಂತಾಗಿ ತಿಳಿದು ಅವರನ್ನು ಸದಾ ಅವಲಂಬಿಗಳನ್ನಾಗಿ ಮಾಡಿದ್ದಾರೆ. ಆದರೆ ಮಗುವನ್ನು ಕೇವಲ ಅವಲಂಬಿ ಎಂದು ತಿಳಿಯದೆ ಅದು ಜೀವಂತ, ಚೇತನಪೂರ್ಣ ವ್ಯಕ್ತಿ ಎಂದು ತಿಳಿಯಬೇಕು. ಜೀವನದ ಯಾವ ಜಂಜಾಟ, ದುಷ್ಟತನಗಳನ್ನು ಅರಿಯದ ಮಗುವಿನ ಮನಸ್ಸು ಶುಭ್ರ ಜೇಡಿ ಮಣ್ಣಿನಂತಿರುತ್ತದೆ. ಇದನ್ನು ಯಾವ

ಆಕಾರಕ್ಕೆ ಬೇಕಾದರೂ ರೂಪಿಸಿಕೊಳ್ಳಬಹುದು, ತಿದ್ದಿಕೊಳ್ಳಬಹುದು. ಇದಕ್ಕೆ ಏನು ಸಿಕ್ಕರೂ ಅಂಟಿಕೊಳ್ಳುತ್ತದೆ. ಆದರೆ ಪ್ರೌಢರಿಗೆ ಇದಾವುದೂ ತಿಳಿಯದೆ ತಾವೇ ದೊಡ್ಡವರು, ಬುದ್ಧಿವಂತರು, ತಮ್ಮ ಆಸೆ ಆಕಾಂಕ್ಷೆಗಳು, ಅಭಿಪ್ರಾಯಗಳೇ ನಡೆಯಬೇಕೆಂಬುದು ಇವರ ಸತತ ಇಚ್ಛೆ. ಆದರೆ ತಮ್ಮ ಅನೇಕ ನಂಬಿಕೆ, ಧೋರಣೆ ಮತ್ತು ಭಾವನೆಗಳು ತಪ್ಪು ಎಂಬುದು ಇವರಿಗೆ ತಿಳಿದಿರುವುದಿಲ್ಲ. ಅಲ್ಲದೆ ತಾವು ದೊಡ್ಡವರಾದ್ದರಿಂದ ತಾವು 'ಬೆಳೆ'ದವರೆಂದು ತಿಳಿದು ತಾವು ಕಲಿಯುವುದು ಉಳಿದಿಲ್ಲವೆಂದು ಭಾವಿಸುತ್ತಾರೆ. ಆದರೆ ಮಗುವಿನ ಮನಸ್ಸು ಸೂಜಿಗಲ್ಲಿನಂತೆ. ತನ್ನತ್ತ ಬಂದುದನ್ನೆಲ್ಲಾ ಆಕರ್ಷಿಸಿ ತನ್ನಲ್ಲಿ ಅಳವಡಿಸಿಕೊಳ್ಳುತ್ತದೆ. ಆದರೆ ಸೂಕ್ತ ವಿಷಯ, ಮಾರ್ಗದರ್ಶನ ನೀಡುವವರು ಉತ್ತಮರು, ಬುದ್ಧಿವಂತರು, ನ್ಯಾಯವಂತರು ಆಗಬೇಕು.

ಮಕ್ಕಳ ಅನೇಕ ಸಮಸ್ಯೆಗಳಿಗೆ ಸಮಾಜದಲ್ಲಿನ ಆರ್ಥಿಕ ಸಮಸ್ಯೆಯೇ ಕಾರಣವೆಂದು ವಾದ ಮಾಡುವವರೂ ಇದ್ದಾರೆ. ಆರ್ಥಿಕ ಸ್ಥಿತಿ ಕೆಲಮಟ್ಟಿಗೆ ಕಾರಣವಿರಬಹುದು. ಸಮಾಜ ಈ ಸಮಸ್ಯೆಯನ್ನು ಅರಿತು ಸೂಕ್ತ ಪರಿಹಾರ ಕಂಡುಕೊಂಡರೆ ಯಾವ ತೊಂದರೆಯೂ ಬರುವುದಿಲ್ಲ. ಉದಾಹರಣೆಗೆ ಇಂದು ನಗರ ಸಮುದಾಯಗಳಲ್ಲಿ ಗೃಹ ಕೃತ್ಯಗಳಿಗೆ ಬಾಲಕ-ಬಾಲಕಿಯರನ್ನು ಇಟ್ಟುಕೊಳ್ಳುವುದು ಸಾಮಾನ್ಯ. ನಗರ ಜೀವನಕ್ಕೆ ಆಸೆಪಟ್ಟು ಅಲ್ಲಿಯ ಬೆಡಗಿಗೆ ಮರುಳಾಗಿ, ಗ್ರಾಮೀಣ ಪರಿಸರ, ತಂದೆ-ತಾಯಿಗಳು, ಪ್ರೀತಿಯ ಕಳ್ಳುಬಳ್ಳಿ ಮತ್ತು ಸಮುದಾಯ ಗುಂಪುಗಳನ್ನು ಬಿಟ್ಟುಬರುವ ಈ ಮಕ್ಕಳ ಗೋಳು ಹೇಳತೀರದು. ಅವು ಬೆಳಗಿನ ಜಾವದಿಂದ ರಾತ್ರಿ ಮಲಗುವವರೆಗೂ ಸದಾ ಒಂದಿಲ್ಲಾ ಒಂದು ಕೆಲಸ ಮಾಡಲೇಬೇಕು. ಮೇಲೆ ಯಜಮಾನಿಯ ಸಿಡುಕಿನ ನುಡಿ

ಗಳು. ಪುಣ್ಯಕ್ಕೆ ಒಳ್ಳೆಯ ಯಜಮಾನಿ ಇದ್ದರೆ ಊಟಕ್ಕೆ ಚಿಂತೆ ಇಲ್ಲ. ಆದರೆ ಅನೇಕ ಕಡೆ ಮನೆಯ ಮಕ್ಕಳು ಬಿಟ್ಟ ಅನ್ನ–ಅರಿವೆಗಳೇ ಇವರಿಗೆ ಗತಿ. ತಮ್ಮ ಮಕ್ಕಳ ಸಮವಯಸ್ಕರಾದ ಇವರಿಂದ ದುಡಿಸಿಕೊಳ್ಳುವ ಈ ನಾಗರಿಕರಿಗೆ ಇವರಿಗೆ ವಿದ್ಯೆ ನೀಡುವುದೂ ಸಾಧ್ಯವಿದೆ. ತಮ್ಮಲ್ಲಿ ಸಾಕಷ್ಟು ದುಡಿಸಿಕೊಂಡು ಉಳಿದ ವೇಳೆಯಲ್ಲಿ ಶಾಲೆಗೆ ಕಳುಹಿಸಬಹುದು. ಇದೂ ಸಾಧ್ಯವಿಲ್ಲದಿದ್ದರೆ ಮನೆಯಲ್ಲಿಯೇ ತಕ್ಕ ವಿದ್ಯೆ, ಬುದ್ಧಿ, ತಿಳುವಳಿಕೆಗಳನ್ನು ನೀಡುವುದು ಸಾದ್ಯವಿದೆ. ತಾವು ಹಣಕೊಟ್ಟು ಸಿನಿಮಾ, ನಾಟಕ ಮುಂತಾದ ಕಡೆ ಹೋದಾಗ ಬೇಡ, ಪುಕ್ಕಟೆಯಾಗಿ ಸಿಗುವ ನಾಟಕ, ಜಾತ್ರೆ, ಉತ್ಸವ ಗಳಿಗೆ,ಯಾರದಾದರೂ ಮನೆಗೆ ಹೋದಾಗ, ಹೊರಗೆ ತಿರುಗಾಡಲು ಹೋದಾಗ ಇವರನ್ನು ಜೊತೆಗೆ ಕರೆದುಕೊಂಡು ಹೋಗಬಹುದು. ಇದರಿಂದ ಅವರಿಗೂ ದಿನ ನಿತ್ಯದ ಕೆಲಸದಿಂದ ಬಿಡುವು ಸಿಕ್ಕು, ಸ್ವಲ್ಪ ಬದಲಾವಣೆಯಾದಂತಾಗುತ್ತದೆ. ಮೇಲಾಗಿ ಅವರಿಗೆ ಉಲ್ಲಾಸವಾಗಿ ಮನೆಗೆಲಸದಲ್ಲಿ ಉತ್ಸಾಹ ತೋರಿಸಬಹುದು. ಅಲ್ಲದೆ, ಈ ಚಿಕ್ಕವಯಸ್ಸಿನ ಮಕ್ಕಳನ್ನು ತಮ್ಮಲ್ಲಿ ಕೆಲಸಕ್ಕಿಟ್ಟು ಕೊಂಡ ತಪ್ಪಿಗೆ ಅವರಿಗೆ ತಕ್ಕ ಊಟ, ವಸತಿ, ಬಟ್ಟೆ, ಸ್ವಚ್ಛತೆ, ಮನೋರಂಜನೆ ಮುಂತಾದವನ್ನು ನೀಡಿ ಸಮಾಜದಲ್ಲಿ ಅನಕ್ಷರಸ್ಥರು, ಅನಾಗರಿಕರು, ಅಪರಾಧಿಗಳು ಹೆಚ್ಚದಂತೆ ಸಹಾಯ ಮಾಡುಬಹುದು. ಹೀಗೆ ಎಲ್ಲರೂ, ಸಾಧ್ಯವಾದ ಕಡೆಗಳಲ್ಲೆಲ್ಲಾ ತಮಗೆ ಸಾಧ್ಯವಾದಷ್ಟು ಸಹಾಯ ಮಾಡುವುದರಿಂದ ಸಮಾಜದಲ್ಲಿ ಸಮಸ್ಯೆಯ ಮಕ್ಕಳ ಸಂಖ್ಯೆ ಕಡಿಮೆಯಾಗಿ ಸರಕಾರವು ದೇಶದ ಮುಖ್ಯ ಸಮಸ್ಯೆಗಳ ಕಡೆ ತನ್ನ ಗಮನ ಹರಿಸಲು ಸಹಾಯವಾಗುತ್ತದೆ.

———

k. u. p. wd 774–5,000 5–5–82

ಉಪನ್ಯಾಸ ಗ್ರಂಥಮಾಲೆಯ ಇತ್ತೀಚಿನ ಪ್ರಕಟನೆಗಳು

೧ ಸಾಂಸರ್ಗಿಕ ರೋಗಗಳು ಮತ್ತು ಅವುಗಳನ್ನು ತಡೆಗಟ್ಟುವ ಕ್ರಮಗಳು
—ಪಿ.ಎಸ್ ಬಣಕಾರ

೨ ಪ್ರಾಚೀನ ಭಾರತದಲ್ಲಿಯ ವಿದ್ಯಾಕೇಂದ್ರಗಳು
—ಅನಂತ ಕುಲಕರ್ಣಿ

೩ ಗಾದೆಗಳಲ್ಲಿ ಆರೋಗ್ಯ
—ಪಿ. ಎಸ್. ಶಂಕರ

೪ ಚಟಗಳು ರುಜಾಢಿಗಳು ಮತ್ತು ಕ್ಯಾನ್ಸರ
—ಎಸ್. ಜೆ. ನಾಗಲೋಟಿಮಠ

೫ ಸಿಡುಬುರೋಗ
—ಬಿ. ಟಿ. ತುಕೋಳ

೬ ರಂಗಭೂಮಿಯ ನಟಸಾರ್ವಭೌಮ ಸಿದ್ರಾಮಪ್ಪ ಹಂದಿಗನೂರ
—ಬಿ. ಆರ್. ನಾಡಗೌಡ

೭ ಮೋಕ್ಷಗುಂಡಂ ವಿಶ್ವೇಶ್ವರಯ್ಯ
—ಶಿವಕುಮಾರ ಪಾಟೀಲ

೮ ತ್ರೀವೇಣಿಯವರ ಕಾದಂಬರಿಗಳು
—ವಿಜಯಶ್ರೀ ಸಬರದ

೯ ದಾಸಸಾಹಿತ್ಯ ಹಾಗೂ ಸಾಮಾಜಿಕ ಮೌಲ್ಯಗಳು
—ಇಲ್ಲೂರು ಜಯರಾಮಪ್ಪ

೧೦ ಸರ್ವೋದಯ ಹಾಗೂ ಜನಕಲ್ಯಾಣ
—ಎಂ.ಎಸ್.ಬಡಕಲಿ

೧೧ ಜನಪದ ಸಾಹಿತ್ಯದಲ್ಲಿ ಹಾಸ್ಯ
—ಮೃತ್ಯುಂಜಯ ಹೊರಕೇರಿ

೧೨ ಕನ್ನಡ ಜನಪದ ಕಾವ್ಯದಲ್ಲಿ ಭಕ್ತಿಯ ನಿರೂಪಣೆ
—ಬಸವರಾಜ ಮಲಶೆಟ್ಟಿ

ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦